# ಪಂಚಾಯತಿ ರಾಜ್ ವ್ಯವಸ್ಥೆಯಲ್ಲಿ ಜಿಯೋಸ್ಪೇಷಿಯಲ್ ತಂತ್ರಾಂಶಗಳ ಬಳಕೆ

ಆಗಸ್ಟ್-2017



KSCST
ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ
ಭಾರತೀಯ ವಿಜ್ಞಾನ ಮಂದಿರದ ಆವರಣ, ಬೆಂಗಳೂರು-560012

# ನೈಸರ್ಗಿಕ ಸಂಪನ್ಮೂಲಗಳ ಮಾಹಿತಿ ನಿರ್ವಹಣಾ ವ್ಯವಸ್ಥೆ

# ಪಂಚಾಯತಿ ರಾಜ್ ವ್ಯವಸ್ಥೆಯಲ್ಲಿ ಜಿಯೋಸ್ಪೇಷಿಯಲ್ ತಂತ್ರಾಂಶಗಳ ಬಳಕೆ – ಆಗಸ್ಟ್ 2017


**ಪ್ರಧಾನ ವಿಚಾರಕ**

**ಶ್ರೀ ಹೆಚ್ ಹೇಮಂತ ಕುಮಾರ್**

ಪ್ರಧಾನ ವೈಜ್ಞಾನಿಕ ಅಧಿಕಾರಿ

**ಸಂಕಲನ**

ಡಾ ಬಿನ್ನಿ ಗೋಪಾಲ್
ಮಂಜುನಾಥ ಎಸ್ ತೋಟದ



KSCST

**ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ**

ಭಾರತೀಯ ವಿಜ್ಞಾನ ಮಂದಿರದ ಆವರಣ, ಬೆಂಗಳೂರು-೫೬೦೦೧೨

# ನೈಸರ್ಗಿಕ ಸಂಪನ್ಮೂಲಗಳ ಮಾಹಿತಿ ನಿರ್ವಹಣಾ ವ್ಯವಸ್ಥೆ

| ಜಿಲ್ಲಾ ಎನ್.ಆರ್.ಡಿ.ಎಂ.ಎಸ್. ಕೇಂದ್ರ - ತಾಂತ್ರಿಕ ಅಧಿಕಾರಿಗಳು | | | |
|---|---|---|---|
| ಹೆಸರು | ಜಿಲ್ಲೆ | ಹೆಸರು | ಜಿಲ್ಲೆ |
| ಮಂಜುನಾಥ ಎಸ್ ತೋಟದ | ಬೆಳಗಾವಿ | ವಿಕ್ರಮ್ ಆರ್ | ಉಡುಪಿ |
| ಚಂದ್ರಶೇಖರ ಕೆ ಗುಂದ | ಬಾಗಲಕೋಟ | ಬಸವರಾಜ್ ಬಾರ್ಕಿ | ಚಿಕ್ಕಮಗಳೂರು |
| ಮಹೇಶ್ ರೆಡ್ಡಿ | ಬೀದರ | ಶ್ರುತಿ ಎಂ ಏನ್ | ತುಮಕೂರು |
| ಮೊಹಮ್ಮದ್ ಫಾರೂಕ್ ಅಲಿ | ರಾಯಚೂರ | ಪ್ರದೀಪ್ ಕುಮಾರ ಬಿ ಎಂ | ಮಂಡ್ಯ |
| ಗುರುಸ್ವಾಮಿ ಪಿ | ಕೊಪ್ಪಳ | ಮಮತಾ ಕೆ ಎಸ್ | ದಕ್ಷಿಣ ಕನ್ನಡ |
| ಓಂಕಾರ ಕೋರಿ | ಗದಗ | ಕಿರಣ ರಾಜ್ ಕೆ | ಕೊಡಗು |
| ಪ್ರತಿಭಾ ವಿ ಹುಬ್ಬಳ್ಳಿ | ಧಾರವಾಡ | ವಿನೋದ ಎಂ | ಮೈಸೂರು |
| ರಾಮಚಂದ್ರ ರೆಡ್ಡಿ ಜಿ ಬಿ | ಬಳ್ಳಾರಿ | ಕಾರ್ತಿಕ್ ಎಂ ಎಸ್ | ಚಾಮರಾಜನಗರ |
| ಕೇತನ್ ಕುಮಾರ ಪಿ | ಚಿತ್ರದುರ್ಗ | ಭೀಮಶೆನ್ ಯಲ್ ಕುಲ್ಕರ್ಣಿ | ಕಲಬುರ್ಗಿ |
| ಗಂಗಾಧರಪ್ಪ ಆರ್ | ದಾವಣಗೆರೆ | ಸಿದ್ಧ ರೆಡ್ಡಿ | ಯಾದಗಿರಿ |
| ಶಂಕರ ಪಿ | ಶಿವಮೊಗ್ಗ | ನಿರಂಜನ್ ಕುಮಾರ ಆರ್ | ಕೋಲಾರ |
| ಪ್ರದೀಪ್ ವಿ ಹೆಗ್ಡೆ | ಹಾವೇರಿ | ಮಂಜುಳ ಆರ್ ಚಂದಗೋಳ | ಚಿಕ್ಕಬಳ್ಳಾಪುರ |
| ಅಕ್ಷಯ್ ಡಿ | ರಾಮನಗರ | | |

| ಹಿರಿಯ ಅಧಿಕಾರಿಗಳು - ಎನ್.ಆರ್.ಡಿ.ಎಂ.ಎಸ್. ಕೇಂದ್ರ | |
|---|---|
| ರಮೇಶ್ ಡಿ ಆರ್ | ಬೆಂಗಳೂರು ಗ್ರಾಮಾಂತರ |
| ಪಾಲನೇತ್ರ ಹೆಚ್ ಆರ್ | ಹಾಸನ |
| ಶಿವಕುಮಾರ ಕೆ ವಿ | ಬೆಂಗಳೂರು ನಗರ |
| ಅನಿಲ ಆರ್ ನಾಯಕ | ಉತ್ತರ ಕನ್ನಡ |

| ರಾಜ್ಯ ಎನ್.ಆರ್.ಡಿ.ಎಂ.ಎಸ್. ಕೇಂದ್ರ |
|---|
| ಸ್ಮಿತಾ ಎಂ ಜೆ |
| ಅನುಷಾ ಹೆಚ್ ಸಿ |
| ಡಾ ಬಿನ್ನಿ ಗೋಪಾಲ್ |

# ವಿಷಯಗಳು


| ಕ್ರ.ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| 1. | ಗ್ರಾಮ ಪಂಚಾಯತಿಗಳ ವ್ಯಾಪ್ತಿಗೆ ಬರುವ ಆಸ್ತಿಗಳ ಜಿಐಎಸ್ ನಕ್ಷೆ | 1 |
| 2. | ಕಾಲೋಚಿತ ನೀರಿನ ಮಟ್ಟದ ಏರಿಳಿತ | 4 |
| 3. | ಸುಧಾರಿತ ಗಸ್ತು ವ್ಯವಸ್ಥೆಯಲ್ಲಿ ಜಿಐಎಸ್ ತಂತ್ರಜ್ಞಾನ | 7 |
| 4. | ಜಲಾನಯನ ಪ್ರದೇಶದಲ್ಲಿ ಕೈಗೊಳ್ಳುವ ಸಂರಕ್ಷಣೆ ಚಟುವಟಿಕೆಗಳ ನಕ್ಷೆ | 13 |
| 5. | ನಗರಯೋಜನಾ ಪುನರ್ ವಿಂಗಡಣೆ ಮತ್ತು ಅವಶ್ಯಕತೆ | 14 |
| 6. | ಆರೋಗ್ಯ ಇಲಾಖೆಗೆ ಜಿ.ಐ.ಎಸ್ ನ ಉಪಯೋಗಗಳು | 16 |
| 7. | ಪ್ರವಾಸಿ ನಕಾಶೆ | 18 |
| 8. | ಪಶುಪಾಲನಾ ಹಾಗು ಪಶುವೈದ್ಯಕೀಯ ಇಲಾಖೆಯ ಆಸ್ತಿಗಳ ನಕ್ಷೆ | 20 |
| 9. | ಬಹುಗ್ರಾಮಗಳ ಕುಡಿಯುವ ನೀರು ಪೂರೈಸುವ ಯೋಜನೆ | 22 |
| 10. | ಜಲಾನಯನ ಪ್ರದೇಶದ ವಿಸ್ತೀರ್ಣ ಕಂಡು ಹಿಡಿಯುವಲ್ಲಿ ಜಿಐಎಸ್ ನ ಉಪಯೋಗಗಳು | 24 |
| 11. | ಮಹಾವಿಧ್ಯಾಲಯಗಳ ನಕ್ಷೆ | 26 |
| 12. | ಅಬಕಾರಿ ಇಲಾಖೆಯಲ್ಲಿ ಜಿಐಎಸ್ ಪಾತ್ರ | 28 |
| 13. | ಐ.ಟಿ.ಸಿ ಕಂಪನಿಯವರಿಗೆ ಜಿಐಎಸ್ ತಂತ್ರಜ್ಞಾನ ಬಳಕೆ ಉದ್ದೇಶ/ಅವಶ್ಯಕತೆ | 30 |
| 14. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಜಿಐಎಸ್ ತಂತ್ರಜ್ಞಾನ ಬಳಕೆ | 32 |
| 15. | ಅಂತರ್ಜಾಲ ಸಂಭವನೀಯ ವಲಯದ ನಕಾಶೆ | 34 |
| 16. | ಭೂಮಿ ಬದಲಾವಣೆಯನ್ನು ಗುರುತಿಸುವಲ್ಲಿ ಜಿಐಎಸ್ ನ ಪಾತ್ರ | 36 |
| 17. | ಭೂಮಾಪನ ಇಲಾಖೆಯಲ್ಲಿ ಸರ್ವೇಯರ್ ಸರ್ಕಲ್ ರಚಿಸುವ ಬಗ್ಗೆ | 39 |
| 18. | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಜಿಐಎಸ್ ಉಪಯೋಗಗಳು | 41 |
| 19. | ಆರೋಗ್ಯ ಇಲಾಖೆಗೆ ಜಿಐಎಸ್ ಉಪಯೋಗಗಳು | 43 |
| 20. | ರೋಗಗಳ ಹರಡುವಿಕೆ ಸಂಬಂಧಿಸಿದಂತೆ ಜಿಐಎಸ್ ಉಪಯೋಗಗಳು | 47 |
| 21. | ಶಿಕ್ಷಣ ಇಲಾಖೆಗೆ ಜಿಐಎಸ್ ಉಪಯೋಗಗಳು | 51 |

# ಗ್ರಾಮ ಪಂಚಾಯತಿಗಳ ವ್ಯಾಪ್ತಿಗೆ ಬರುವ ಆಸ್ತಿಗಳ ಜಿಐಎಸ್ ನಕ್ಷೆ

**ವಿಕ್ರಮ್ ಆರ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಉಡುಪಿ**

**ಅಗತ್ಯತೆ**

ಉಡುಪಿ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಜನವರಿ 2016 ರಂದು ಸಭೆಯನ್ನು ಕರೆದು, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾದಿಕಾರಿ ಹಾಗು ಜಿಲ್ಲಾ ಪಂಚಾಯತ್ ಸಂಬಂಧ ಪಟ್ಟ ಅಧಿಕಾರಿಯೊಂದಿಗೆ ಚರ್ಚಿಸಿ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತಿವಾರು ಆಸ್ತಿಗಳ ದಾಖಲೀಕರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ನೈಸರ್ಗಿಕ ಸಂಪನ್ಮೂಲ ದತ್ತಾಂಶ ನಿರ್ವಹಣಾ ವ್ಯವಸ್ಥೆಯ (ಎನ್.ಆರ್.ಡಿ.ಎಂ.ಎಸ್) ಮೂಲಕ ಜಿಪಿಎಸ್ (GPS) ಉಪಕರಣದ ಸಹಾಯದೊಂದಿಗೆ GIS ತಂತ್ರಜ್ಞಾನವನ್ನು ಅಳವಡಿಸಿಕೊಂಡು ಗ್ರಾಮಪಂಚಾಯತಿಗಳ ಆಸ್ತಿಗಳ ದಾಖಲೀಕರಣವನ್ನು ( ಅಕ್ಷಾಂಶ ರೇಖಾಂಶ) GIS ನಕ್ಷೆ ಮೂಲಕ ಅಳವಡಿಸಿ ಕೊಡಬೇಕಾಗಿ ಜಿಲ್ಲಾ ಎನ್.ಆರ್.ಡಿ.ಎಂ.ಎಸ್. ಶಾಖೆಗೆ ಆದೇಶಿಸಿರುತ್ತಾರೆ.

**ಉದ್ದೇಶಗಳು**

ಗ್ರಾಮಪಂಚಾಯತಿಗಳ ವ್ಯಾಪ್ತಿಗೆ ಬರುವ ಆಸ್ತಿವಾರು ಸಮೀಕ್ಷೆಯ ಮುಖ್ಯ ಉದ್ದೇಶವು ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಆಸ್ತಿ ಗಳನ್ನು GIS ನಕ್ಷೆಯಲ್ಲಿ ದಾಖಲೀಕರಣಗೊಳಿಸುವುದು. ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಇರುವ ಪ್ರಸ್ತುತ ಆಸ್ತಿಗಳ ಸಮೀಕ್ಷೆಯಿಂದ ಬಹುತೇಕ ಎಲ್ಲಾ ಇಲಾಖೆಗಳ ಹಾಗು ಜನ ಸಾಮಾನ್ಯರಿಗೆ ಸಂಬಂಧಿಸಿದಂತೆ ಸೌಕರ್ಯಗಳನ್ನು ಒದಗಿಸುವ ಕುರಿತು ಹಾಗು ಯೋಜನೆ ಗಳನ್ನು ರೂಪಿಸಲು GIS ನಕ್ಷೆಯ ಅವಶ್ಯಕತೆ ಇರುತ್ತದೆ.

**ವಿಧಾನ**

ಉಡುಪಿ ಜಿಲ್ಲೆಯ ಗ್ರಾಮಪಂಚಾಯತಿಗಳ ವ್ಯಾಪ್ತಿಗೆ ಬರುವ ಆಸ್ತಿಗಳ ಸಮೀಕ್ಷೆ ನಡೆಸಲು ಹಾಗು ಆಸ್ತಿಗಳ ಸಮೀಕ್ಷೆಯ ದತ್ತಾಂಶವನ್ನು GIS ತಂತ್ರಜ್ಞಾನದಲ್ಲಿ (ಅಪ್ಲಿಕೇಶನ್) ಅಳವಡಿಸಿಕೊಂಡು ನಕ್ಷೆಯನ್ನು ತಯಾರಿಸಲು ಪ್ರಮುಖ ಮೂರು ಹಂತದಲ್ಲಿ ಆಯೋಜನೆ ಮಾಡಲಾಗಿರುತ್ತದೆ.

**ಮೊದಲನೆಯ ಹಂತ**

ಗ್ರಾಮಪಂಚಾಯತಿವಾರು ಆಸ್ತಿಗಳ ಸಮೀಕ್ಷೆ ಹಾಗು ದಾಖಲೀಕರಣಕ್ಕೆ ಸಂಬಂಧಿಸಿದಂತೆ ಮೊದಲನೇ ಹಂತದಲ್ಲಿ ಆಸ್ತಿಗಳ ಮಾಹಿತಿಯನ್ನು ಪಡೆದು ಕ್ಷೇತ್ರ ಭೇಟಿ ಮಾಡಿ ಸ್ಥಳದ ಅಕ್ಷಾಂಶ ರೇಖಾಂಶಗಳ (LOCATION) ವಿವರವನ್ನು GPS ಮೂಲಕ ಮಾಹಿತಿ ಸಂಗ್ರಹಣೆ ಮಾಡುವುದು. ಇದಕ್ಕಾಗಿ ಸಿಬ್ಬಂದಿ ಅವಶ್ಯಕತೆ ಇರುವುದರಿಂದ ಸ್ಥಳೀಯ ಕಾಲೇಜುಗಳ ವಿದ್ಯಾರ್ಥಿಗಳನ್ನು ನಿಯೋಜನೆ ಮಾಡಲಾಗಿರುತ್ತದೆ. ಆ ವಿದ್ಯಾರ್ಥಿಗಳಿಗೆ ಜಿ.ಪಿ.ಎಸ್ (GPS) ಉಪಕರಣವನ್ನು ಮಾಹಿತಿ ಸಂಗ್ರಹಣೆಗೆ ಹೇಗೆ ಬಳಸಿಕೊಳ್ಳ ಬೇಕೆಂದು ಸಂಬಂಧಪಟ್ಟ ಕಾಲೇಜುಗಳಿಗೆ ಜಿಲ್ಲಾ ಪಂಚಾಯತಿಯ ಎನ್.ಆರ್.ಡಿ.ಎಂ.ಎಸ್. ವತಿಯಿಂದ ಕಾರ್ಯಾಗಾರವನ್ನು ಏರ್ಪಡಿಸಿ GIS ತಂತ್ರಜ್ಞಾನ ಮತ್ತು

ಅದರ ಉಪಯುಕ್ತತೆಗಳ ಕುರಿತು ಹಾಗು GPS ಉಪಕರಣವನ್ನು ಉಪಯೋಗಿಸುವ ಕುರಿತು ತರಬೇತಿ ನೀಡಲಾಗಿರುತ್ತದೆ.

**ಎರಡನೇ ಹಂತ**

ಜಿ.ಐ.ಎಸ್ (GIS) ತಂತ್ರಜ್ಞಾನ ಹಾಗು ಜಿ ಪಿ ಎಸ್ ನ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ತಲಾ ಒಂದು ಗ್ರಾಮ ಪಂಚಾಯತ್ ಗಳಿಗೆ 3 ರಿಂದ 4 ಜನರಂತೆ ಪ್ರತ್ಯೇಕ ಗುಂಪು ಗಳನ್ನು ಆಯೋಜಿಸಿ ಅವರೊಂದಿಗೆ ಸಂಬಂಧ ಪಟ್ಟ ಗ್ರಾಮ ಪಂಚಾಯತ್ನ ಪಿ.ಡಿ.ಓ ಅಥವಾ ಸಿಬ್ಬಂದಿಯನ್ನು ಕ್ಷೇತ್ರ ಭೇಟಿಗೆ GPS ಅಕ್ಷಾಂಶ ರೇಖಾಂಶಗಳ ಮಾಹಿತಿಯನ್ನು ಸಂಗ್ರಹಿಸಲು ನಿಯೋಜಿಸಲಾಗಿರುತ್ತದೆ. ಇದಕ್ಕೆ ಸಂಬಂಧ ಪಟ್ಟಂತೆ ಇತರ ಮಾಹಿತಿಗಾಗಿ ಹಾಗೂ ತಾಂತ್ರಿಕ ಮೇಲುಸ್ತುವಾರಿಯಾಗಿ ಜಿಲ್ಲಾ ಎನ್.ಆರ್.ಡಿ.ಎಂ.ಎಸ್ ಶಾಖೆಗೆ ವಹಿಸಲಾಗಿರುತ್ತದೆ.

**ಮೂರನೆಯ ಹಂತ**

ಸ್ಥಳೀಯ ಶಾಲೆಯ ವಿದ್ಯಾರ್ಥಿಗಳು ಹಾಗು ಸಂಬಂಧ ಪಟ್ಟ ಗ್ರಾಮ ಪಂಚಾಯತ್ ನ ಸಿಬ್ಬಂದಿಗಳಿಂದ ಸಂಗ್ರಹಿಸಿದ ಆಸ್ತಿಗಳ GPSನ ಅಕ್ಷಾಂಶ ರೇಖಾಂಶಗಳ ಮಾಹಿತಿಗಳನ್ನು ಕ್ರೋಡೀಕರಿಸಿ, ಪರಿಶೀಲಿಸಿ GIS ಸಾಫ್ಟ್ ವೇರ್ ನಲ್ಲಿ ಡಿಜಿಟೈಸ್ ಮಾಡಲಾಗಿರುತ್ತದೆ. ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುವ ಆಸ್ತಿಗಳ ದಾಖಲೀಕರಣದ ದತ್ತಾಂಶ ವನ್ನು GIS ನಕ್ಷೆಯಾಗಿ ತಯಾರಿಸಿ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಹಾಗು ಜಿಲ್ಲಾ ಮುಖ್ಯ ಯೋಜನಾದಿಕಾರಿಯವರ ಸಮಕ್ಷಮದಲ್ಲಿ ನಕ್ಷೆಗಳನ್ನು ಸಂಬಂಧ ಪಟ್ಟ ಗ್ರಾಮ ಪಂಚಾಯತ್ ಗಳಿಗೆ ನೀಡಲಾಗಿರುತ್ತದೆ.

**ಗ್ರಾಮ ಪಂಚಾಯತ್ ವಾರು ಆಸ್ತಿ ದಾಖಲೀಕರಣದ GIS ನಕ್ಷೆಯ ಉಪಯುಕ್ತತೆಗಳು**

ಪ್ರಸ್ತುತ ಉಡುಪಿ ಜಿಲ್ಲೆಯಲ್ಲಿ 158 ಗ್ರಾಮ ಪಂಚಾಯತ್ ಗಳ ಪೈಕಿ ಇದುವರೆಗೂ ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ 92 ಗ್ರಾಮ ಪಂಚಾಯತಿ ವಾರು ಆಸ್ತಿಗಳ ದಾಖಲೀಕರಣ ಮುಗಿದಿದ್ದು ಅದರಲ್ಲಿ ಸುಮಾರು 45 ಗ್ರಾಮ ಪಂಚಾಯತ್ ಗಳ ಆಸ್ತಿ ಸಮೀಕ್ಷೆಯ ದಾಖಲೀಕರಣದೊಂದಿಗೆ ನಕ್ಷೆ ಗಳನ್ನೂ ತಯಾರಿಸಲಾಗಿರುತ್ತದೆ. ಇದರ ಅನ್ವಯ ಸಂಬಂಧ ಪಟ್ಟ ಗ್ರಾಮ ಪಂಚಾಯತಿಗಳ ಸಾರ್ವಜನಿಕರ ಮಾಹಿತಿಗೆ ಅನುಗುಣವಾಗಿ ನಕ್ಷೆಯನ್ನು ನೀಡಲಾಗಿರುತ್ತದೆ. ಹಾಗು ವಿವಿಧ ಇಲಾಖೆಗಳ ಮತ್ತು ಜಿಲ್ಲಾ ಪಂಚಾಯತ್ ಹಾಗು ಗ್ರಾಮ ಪಂಚಾಯತಿಗಳ ಕಾರ್ಯ ತಂತ್ರ ರೂಪಿಸಲು ಅನುಕೂಲವಾಗುವಂತೆ ಮಾಡಲಾಗಿರುತ್ತದೆ.

**ಪ್ರಸ್ತಾವನೆ**

ಗ್ರಾಮ ಪಂಚಾಯತ್ ವಾರು ಆಸ್ತಿ ದಾಖಲೀಕರಣಕ್ಕೆ ಸಂಬಂಧಿಸಿದಂತೆ ತಯಾರಿಸಲಾದ ನಕ್ಷೆಗಳ ಉಪಯೋಗಗಳ ಬಳಿಕ ವಿವಿಧ ಗ್ರಾಮ ಪಂಚಾಯತ್ ಗಳಿಂದ ಇದರೊಂದಿಗೆ ರಸ್ತೆ, ನೀರಿನ ಪೈಪ್ ಲೈನ್ ಹಾಗು ಬೀದಿ ದೀಪಗಳ ದಾಖಲೀಕರಣದೊಂದಿಗೆ GIS ನಕ್ಷೆ ತಯಾರಿಸಲು ಜಿಲ್ಲಾ ಎನ್.ಆರ್.ಡಿ.ಎಂ.ಎಸ್ ಶಾಖೆಗೆ ಪ್ರಸ್ತಾವನೆ ಇಟ್ಟಿರುತ್ತಾರೆ


KUTHYAR GRAMAPANCHAYATH GIS MAP (Asset Mapping)
NRDMS
KSCST
PADOOR
SHIRVA
BELAPU
YELLUR
PILAR
108 KALTHUR
KUTHYAR
N
W
E
S
INDEX
- G P Boundary
- Village Boundary
- Asset Location
- Water Supply Pipeline
ROADS
Cart Track
District Road
Village Road
LAND USE LAND COVER
Barren Rocky / Stony Waste / Sheet Rock Area
Habitation with Vegetation
Kharif crop
Lake / Tanks
Land with scrub
Mixed Vegetation
River / Stream
Tree Groves
Asset Abbreviation
P S - Primary School
H P S - Higher Primary School
OW - Open Well
PH - Pump House
BW- Bore Well
OHT - Over Head Tank
HP - Hand Pump
PO - Post Office
PHC - Primary Health Center
Tank - Kere
0
1
2
kilometers
Prepared by : District NRDMS Center, Rajathadri, ZP, Udupi
GP OFFICE/LIBRARY/HALL
TEMPLE
SCHOOL
ANGANWADI
VA OFFICE
SOCIETY
OHT
OHT/RICEMILL
BRIDGE
STARTING POINT
BURRIED LAND
FISH MARKET
GP BUILDING
OPEN WELL
VA OFFICE
ANGANWADI KALTHURU
BUSTAND
POST OFFICE
DAIRY
GP SHOP/BUSTAND
OHT/PH
OLD GP OFFICE/BUSTAND/HP
HP_PIPELINE_END
MWS_TANK
VIJAY BANK
OW/COLONY
CHURCH
SOCIETY/BANK
PH/OHT
CIRCLE
TANK

# ಕಾಲೋಚಿತ ನೀರಿನ ಮಟ್ಟದ ಏರಿಳಿತ

**ಕೆ ಕಿರಣ್ ರಾಜ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಕೊಡಗು**

**ಉದ್ದೇಶ**

ಬರಪರಿಹಾರ ಸಭೆಗೆ ಅಂತರ್ಜಲ ಮಟ್ಟದ ವರದಿ ತಯಾರಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ವ್ಯಾಪ್ತಿಗೆ ಬರುವಂತಹ ವೀಕ್ಷಣೆ ಬಾವಿಗಳು (OBSERVATION WELLS) ಮತ್ತು ಕಾಲೋಚಿತ ನೀರಿನ ಮಟ್ಟ ಏರಿಳಿತ (SESONAL WATER LEVEL FLUCTUATION) ಗಳ ನಕ್ಷೆ ತಯಾರಿಸಿ ಕೊಡುವಂತೆ ಹಿರಿಯ ಭೂವಿಜ್ಞಾನಿಯ ಕೋರಿಕೆ ಮೇರೆಗೆ ಜಿಲ್ಲಾ ಎನ್.ಆರ್.ಡಿ.ಎಂ.ಎಸ್ ಕೇಂದ್ರದಿಂದ ಇಲಾಖೆಗೆ ಅನುಕೂಲವಾಗುವಂತೆ ನಕ್ಷೆಯನ್ನು GIS ತಂತ್ರಜ್ಞಾನ ಉಪಯೋಗಿಸಿ ಮಾಡಿಕೊಡಲಾಯಿತು.

**ವಿಧಾನ**

ಕೊಡಗು ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆ ವ್ಯಾಪ್ತಿಗೆ ಬರುವಂತಹ 29 ವೀಕ್ಷಣೆ ಬಾವಿಗಳು (OBSERVATION WELLS) ಮತ್ತು ಕಾಲೋಚಿತ ನೀರಿನ ಮಟ್ಟ ಏರಿಳಿತ (SESONAL WATER LEVEL FLUCTUATION) ಗಳ ಅಂಕಿ ಅಂಶಗಳನ್ನು GIS ತಂತ್ರಜ್ಞಾನದ ಮೂಲಕ ಗಣಕೀಕೃತಗೊಳಿಸಲಾಯಿತು. ಗಣಕೀಕೃತಗೊಳಿಸಿದ ಅಂಕಿ ಅಂಶಗಳನ್ನು interpolation ತಂತ್ರ ಬಳಸಿ ನಕ್ಷೆಯನ್ನು ತಯಾರಿಸಲಾಯಿತು.



**ಅಂಕಿ ಅಂಶಗಳ ಅವಶ್ಯಕತೆ**

- ಎನ್.ಆರ್.ಡಿ.ಎಂ.ಎಸ್ ಕೇಂದ್ರದಲ್ಲಿ ಲಭ್ಯವಿರುವ ಜಿಲ್ಲಾ ಗಡಿ,ತಾಲ್ಲೂಕು ಗಡಿ, ಗ್ರಾಮ ಗಡಿಪದರಗಳನ್ನು ಬಳಸಲಾಯಿತು.
- 29ವೀಕ್ಷಣೆ ಬಾವಿಗಳ (OBSERVATION WELLS) ಜಿಪಿಎಸ್ ಮಾಹಿತಿ ಹಾಗೂ ಕಾಲೋಚಿತ ನೀರಿನ ಮಟ್ಟ ಏರಿಳಿತ (SESONAL WATER LEVEL FLUCTUATION) ಗಳ ಅಂಕಿ ಅಂಶಗಳ ಅವಶ್ಯಕತೆ ಇರುತ್ತದೆ.
- ವಾರ್ಷಿಕ ವಾಸ್ತವಿಕ ಹಾಗೂ ವಾಡಿಕೆ ಸರಾಸರಿ ಮಳೆಯ ಮಾಹಿತಿ ಅವಶ್ಯಕತೆ ಇರುತ್ತದೆ.

**ಬಳಕೆದಾರನ ಅವಶ್ಯಕತೆ / ಉಪಯೋಗ**

- ಬರಪರಿಹಾರ ಸಭೆಗೆ ಅಂತರ್ಜಲ ಮಟ್ಟದ ವರದಿ ತಯಾರಿಸಲು NRDMS ಕೇಂದ್ರದಿಂದ ತಯಾರಿಸಿದ ನಕ್ಷೆಯನ್ನು ಬಳಸಲಾಗಿದೆ.
- ನಕ್ಷೆಯಲ್ಲಿ ಕಾಲೋಚಿತ ನೀರಿನ ಮಟ್ಟ ಏರಿಳಿತವನ್ನು ವಿವಿದ ಬಣ್ಣದಲ್ಲಿ ಸೂಚಿಸಿರುವುದರಂದ ಸಭೆಯಲ್ಲಿ ವಿವರಿಸಲು ಅನುಕೂಲವಾಗುವುದೆಂದು ಹಿರಿಯ ಭೂವಿಜ್ಞಾನಿಯವರು ತಿಳಿಸಿದರು.
- ನಕ್ಷೆಯಲ್ಲಿ ತೋರಿಸಿರುವಂತೆ ನೀರಿನ ಮಟ್ಟ ಇಳಿಕೆಯಾಗಿರುವ ಪ್ರದೇಶಗಳಲ್ಲಿ ಅಂತರ್ಜಲ ಮಟ್ಟ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಕ್ಷೆ ಅನುಕೂಲವಾಗುವುದೆಂದು ಹಿರಿಯ ಭೂವಿಜ್ಞಾನಿಯವರು ತಿಳಿಸಿದರು.


KODAGU DISTRICT
SEASONAL WATER LEVEL FLUCTUATION
(May - November)
75°31'20"E
75°41'30"E
75°51'40"E
76°1'50"E
12°51'10"N
12°41'0"N
12°30'50"N
12°20'40"N
12°10'30"N
12°0'20"N
11°50'10"N
N
S
E
W
0 4 8 16
Kilometers
DAKSHINA KANNADA DISTRICT
HASSAN DISTRICT
MYSORE DISTRICT
WAYANAD DISTRICT
KERALA STATE
SOMWARPET
MADIKERI
VIRAJPET
2.74
0.45
0.9
1.32
4.4
0.5
0.82
1.31
0.46
0.33
3.25
4.68
1.73
2.0
2.35
2.19
0.17
0.57
0.81
0.83
1.28
0.08
2.77
0.24
-0.98
2.03
0.28
1.26
0.7
DTW (mbgl)
Fluctuation
-0.9- -0.03
-0.03 - 0.9
0.9- 1.8
1.8-2.8
2.8-3.8
3.8- 4.8
Observation wells
District Boundary
Taluk Boundary
Prepared By:
District NRDMS Centre
Kodagu Zilla Panchayath
Madikeri
Source: Mines and Geology Department, Kodagu

# ಸುಧಾರಿತ ಗಸ್ತು ವ್ಯವಸ್ಥೆಯಲ್ಲಿ ಜಿಐಎಸ್ ತಂತ್ರಜ್ಞಾನ

**ಪಿ ಶಂಕರ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಶಿವಮೊಗ್ಗ**

**ಉದ್ದೇಶ**

ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಮತ್ತು ಕಡಿವಾಣ ಹಾಕಲು ಪೋಲಿಸರು ಜನಸ್ನೇಹಿಯಾಗಬೇಕು, ಸಮುದಾಯದತ್ತ ಸಾಗಬೇಕು ಎಂಬ ಹಿನ್ನಲೆಯಲ್ಲಿ ಜಿಲ್ಲಾ ರಕ್ಷಣಾಧಿಕಾರಿಗಳು,ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ಕೋರಿಕೆಯನ್ವಯ ಶಿವಮೊಗ್ಗ ಜಿಲ್ಲೆಯಲ್ಲಿ ಸುಧಾರಿತ ಪೊಲೀಸ್ ಗಸ್ತು ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಜಿಐಎಸ್ ತಂತ್ರಜ್ಞಾನ ಬಳಸಿ ಎನ್.ಆರ್.ಡಿ.ಎಂ.ಎಸ್ ಕೇಂದ್ರದಲ್ಲಿ ಗಸ್ತುವಾರು ವಿಷಯಾಧಾರಿತ ನಕ್ಷೆಯನ್ನು ತಯಾರಿಸಿಕೊಡುವುದು.

ಈ ವ್ಯವಸ್ಥೆಯಡಿಯಲ್ಲಿ ಪ್ರತಿ ವಾರ್ಡ್/ಹಳ್ಳಿಗಳನ್ನು ಜನಸಂಖ್ಯೆ ಮತ್ತು ವಿಸ್ತೀರ್ಣದನುಗುಣವಾಗಿ ವಿಂಗಡಿಸಿ, ವಿಂಗಡಿಸಿದ ಹಳ್ಳಿ/ವಾರ್ಡ್ಗಳಿಗೆ ಒಬ್ಬರಂತೆ ಪೊಲೀಸ್ ಸಿಬ್ಬಂದಿಯನ್ನು ಗಸ್ತುಗಾಗಿ ನಿಯೋಜಿಸಲಾಗುತ್ತದೆ (ನಗರ ಪ್ರದೇಶದಲ್ಲಿ 500-600 ಮನೆಗಳಿಗೆ ಒಬ್ಬ ಸಿಬ್ಬಂದಿ, ಗ್ರಾಮೀಣ ಪ್ರದೇಶದಲ್ಲಿ 2-8 ಹಳ್ಳಿಗಳಿಗೆ ಒಬ್ಬ ಸಿಬ್ಬಂದಿ). ಅವರು ವಾರ್ಡ್ಗಳಲ್ಲಿ ನಡೆಯುವ ಎಲ್ಲಾ ವಿದ್ಯಮಾನಗಳ ಬಗ್ಗೆ ಸೂಕ್ಷ್ಮವಾಗಿ ನಿಗಾ ಇಡುವುದರ ಜೊತೆಗೆ ಸಾರ್ವಜನಿಕರೊಂದಿಗೆ ಹೆಚ್ಚಿನ ನಿಕಟ ಸಂಪರ್ಕ ಸಾಧಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಖ್ಯವಾಗಿ, ವೈಜ್ಞಾನಿಕ ತಂತ್ರಜ್ಞಾನಗಳಾದ ಜಿಐಎಸ್ ಮತ್ತು ಜಿಪಿಎಸ್ ತಂತ್ರಜ್ಞಾನ ಬಳಸಿ ವಾರ್ಡ ಮತ್ತು ಹಳ್ಳಿಗಳನ್ನು ವಿಂಗಡಿಸಿ ಗಸ್ತುವಾರು ನಕ್ಷೆಯನ್ನು ತಯಾರಿಸುವ ಅಗತ್ಯತೆ ಇರುತ್ತದೆ. ಜೊತೆಗೆ ಪೋಲಿಸ್ ಠಾಣೆಗಳು, ಹಳ್ಳಿಗಳು, ಹಳ್ಳಿಯಲ್ಲಿ ಹಾದು ಹೋಗುವ ಮುಖ್ಯ ರಸ್ತೆಯನ್ನೊಳಗೊಂಡಂತೆ ಹಳ್ಳಿ ರಸ್ತೆಗಳು ಇತ್ಯಾದಿ ಅಂಶಗಳನ್ನು ನಕ್ಷೆಯಲ್ಲಿ ಗುರುತಿಸಬೇಕಾಗಿರುತ್ತದೆ. ಇದುವರೆಗೂ ಸಂಪ್ರದಾಯಕವಾಗಿ ಬಣ್ಣಗಳನ್ನು ಬಳಸಿ ನಕ್ಷೆಗಳನ್ನು ಪೊಲೀಸ್ ಇಲಾಖಾವತಿಯಿಂದ ತಯಾರಿಸಲಾಗುತ್ತಿತ್ತು. ಮೊತ್ತ ಮೊದಲಬಾರಿಗೆ ಜಿಲ್ಲಾ ಪೊಲೀಸ್ ಅಧೀಕ್ಷಕರು ಮತ್ತು ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಇವರು ಜಿಲ್ಲಾ ಪಂಚಾಯತ್ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಸಂಪನ್ಮೂಲಗಳ ದತ್ತಾಂಶ ನಿರ್ವಹಣಾ ವ್ಯವಸ್ಥೆ ನೆರವಿನಿಂದ ವೈಜ್ಞಾನಿಕ ಬೀಟ್ ನಕ್ಷೆಗಳನ್ನು ತಯಾರಿಸಿದ್ದಾರೆ.

**ಅಂಕಿ ಅಂಶಗಳು ಮತ್ತು ವಿಧಾನಗಳು**

ಸರ್ವೆ ಆಫ್ ಇಂಡಿಯಾದ 1:50,000 ಸ್ಕೇಲ್ ಆಧಾರಿತ ಟೋಪೋಶೀಟ್ ಗಳನ್ನಾಧರಿಸಿ ತಯಾರಿಸಲಾದ ಹಳ್ಳಿಗಳ ಗಡಿಗಳನ್ನು ಬೇಸ್ (BASE) ನಕ್ಷೆಗಳನ್ನಾಗಿ ಬಳಸಿಕೊಳ್ಳಲಾಗಿದೆ. ಸದರಿ ನಕ್ಷೆಗಳಿಗೆ ಜಿಲ್ಲಾ ರಕ್ಷಣಾಧಿಕಾರಿಗಳ ಇಲಾಖೆ, ಶಿವಮೊಗ್ಗ ಇವರಿಂದ ಸಂಗ್ರಹಿಸಲ್ಪಟ್ಟ ಪೊಲೀಸ್ ಠಾಣಾವಾರು ಹಳ್ಳಿವಾರು ಕುಟುಂಬಗಳ ದತ್ತಾಂಶಗಳನ್ನು ಜಿ.ಐ.ಎಸ್ ತಂತ್ರಜ್ಞಾನ ಮತ್ತು ಸಾಫ್ಟ್ ವೇರ್ ಬಳಸಿ ಲಿಂಕ್ ಮಾಡಲಾಯ್ತು. ಗಸ್ತು ವ್ಯವಸ್ಥೆಯಡಿ ನಗರ ಪ್ರದೇಶಗಳಲ್ಲಿ 500-600 ಕುಟುಂಬಗಳನ್ನಾಧರಿಸಿ, ಗ್ರಾಮೀಣ ಪ್ರದೇಶಗಳಲ್ಲಿ 2-8 (ಜನಸಂಖ್ಯೆ ಮೇರೆಗೆ) ಹಳ್ಳಿಗಳನ್ನಾಧರಿಸಿ ಗಸ್ತು ಗಡಿಯನ್ನು ತಯಾರಿಸಲಾಯ್ತು. ಬೀಟ್ ನ ಕೇಂದ್ರಸ್ಥಾನ

(Beat Headquarter) ಪೊಲೀಸ್ ಠಾಣೆಯ ಸ್ಥಳವನ್ನು ಜಿ.ಪಿ.ಎಸ್. ಉಪಕರಣ ಬಳಸಿ, ದಾಖಲೀಕರಿಸಿದ್ದ ಅಕ್ಷಾಂಶ ರೇಖಾಂಶದ ಅನ್ವಯ ಪೋಲಿಸ್ ಠಾಣೆವಾರು ನಕ್ಷೆಯಲ್ಲಿ ಗುರಿತಿಸಲಾಯ್ತು ಮತ್ತು ಜೊತೆಗೆ ಮಲೆನಾಡು ಪ್ರದೇಶಗಳಲ್ಲಿ ಬೇಚಾರಕ್ ಗ್ರಾಮಗಳನ್ನು ಎನ್.ಆರ್.ಡಿ.ಎಂ.ಎಸ್, ಕೇಂದ್ರದಲ್ಲಿ ಕ್ರೋಡಿಕರಿಸಿದ ಬೇಚಾರಕ್ ಗ್ರಾಮಗಳ ಠರಾವಣಿ (Settlements) ಗಳನ್ನು ಬಳಸಿ ಗಸ್ತು ಗಡಿಯನ್ನು ರಚಿಸಲಾಯ್ತು. ಜೊತೆಗೆ ಹಳ್ಳಿವಾರು ವಿವಿಧ ರಸ್ತೆಯ ಪದರಗಳನ್ನು ಗಸ್ತುವಾರು ವಿಷಯಾಧಾರಿತ ನಕ್ಷೆಗಳನ್ನು ತಯಾರಿಸುವಲ್ಲಿ ಬಳಸಿಕೊಳ್ಳಲಾಯ್ತು. ಪೊಲೀಸ್ ಗಸ್ತು ನಕ್ಷೆಯನ್ನು ತಯಾರಿಸುವಾಗ ಕೆಳಕಂಡ ನಮೂನೆಯಲ್ಲಿ ಪೋಲಿಸ್ ಇಲಾಖೆಯಿಂದ ದತ್ತಾಂಶವನ್ನು ಸಂಗ್ರಹಿಸಲಾಯ್ತು.

| ಪೊಲೀಸ್ ಠಾಣೆಯ ಹೆಸರು | ಪೊಲೀಸ್ ಠಾಣೆಯಡಿ ಬರುವ ಹಳ್ಳಿಗಳು | ಸುಧಾರಿತ ಬೀಟ್ ವ್ಯವಸ್ಥೆಗಿಂತ ಮುಂಚಿನ ಗಸ್ತು ಸಂಖ್ಯೆ | ನೂತನ ಸುಧಾರಿತ ಬೀಟ್ ವ್ಯವಸ್ಥೆಯಡಿಯ ಹೊಸ ಗಸ್ತು ಸಂಖ್ಯೆ |
|---|---|---|---|
| | | | |

**ನಕ್ಷೆಯ ಉಪಯೋಗಗಳು ಮತ್ತು ಬಳಕೆದಾರನ ಅವಶ್ಯಕತೆ**

ಬಳಕೆದಾರರಿಗೆ ಜಿಲ್ಲಾ ಎನ್.ಆರ್.ಡಿ.ಎಂ.ಎಸ್ ಕೇಂದ್ರದಿಂದ ತಯಾರಿಸಿರುವ ವೈಜ್ಞಾನಿಕ ಆಧಾರಿತ ನಕ್ಷೆಗಳಿಂದ ಕೆಳಕಂಡ ಉಪಯೋಗಗಳಿವೆ.

- ಬಳಕೆದಾರರಿಗೆ ಜಿಐಎಸ್ ಮತ್ತು ಜಿಪಿಎಸ್ ತಂತ್ರಜ್ಞಾನ ತಯಾರಿಸಲ್ಪಟ್ಟಿರುವ ಈ ನಕ್ಷೆಗಳು ವೈಜ್ಞಾನಿಕ ಆಧಾರಿತವಾಗಿರುವುದರಿಂದ ಗಸ್ತುಗಳ ವರ್ಗೀಕರಣದ ಸಮಯದಲ್ಲಿ ಹಳ್ಳಿಗಳ ವರ್ಗೀಕರಣಗಳನ್ನು ಜನಸಂಖ್ಯೆ ಮತ್ತು ಹಳ್ಳಿಯ ವಿಸ್ತೀರ್ಣದನುಗುಣವಾಗಿ ಸುಲಭವಾಗಿ ವರ್ಗೀಕರಿಸಲಾಗಿದೆ.
- ರಾಷ್ಟೀಯ ಹೆದ್ದಾರಿ,ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳು ಮುಖ್ಯವಾಗಿ ಹಳ್ಳಿ ರಸ್ತೆಗಳನ್ನೊಳಗೊಂಡ ಪದರಗಳನ್ನು ಬಳಸಿ ವೈಜ್ಞಾನಿಕವಾಗಿ ನಕ್ಷೆಗಳನ್ನು ತಯಾರಿಸುವುದರಿಂದ ಗಸ್ತಿನಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಗಳಿಗೆ ಮತ್ತು ಅಧಿಕಾರಿಗಳಿಗೆ ಸ್ಥಳೀಯ ಭೂಪ್ರದೇಶ ಮತ್ತು ಸಮಸ್ಯೆಗಳನ್ನು ಅರಿಯುವುದು ಸುಲಭಕರ ನಕ್ಷೆಗಳನ್ನು ಬಳಸಿ ರೂಟ್ ಯೋಜನೆಯನ್ನು ರೂಪಿಸುವುದು ಸುಲಭವಾಗಿದೆ.
- ಎನ್.ಆರ್.ಡಿ.ಎಂ.ಎಸ್ ಕೇಂದ್ರದಲ್ಲಿ ಈಗಾಗಲೇ ಲಭ್ಯವಿರುವ ಮೂಲಭೂತ ಸೌಕರ್ಯಗಳಾದ ಶಾಲೆಗಳು, ಆಸ್ಪತ್ರೆಗಳು, ಸರ್ಕಾರಿ ವಸತಿ ಹಾಸ್ಟೆಲ್ ಗಳು ಮತ್ತಿತರ ಮೂಲಭೂತ ಸೌಕರ್ಯದ ದತ್ತಾಂಶಗಳನ್ನು ನಕ್ಷೆಗಳಲ್ಲಿ ಅಳವಡಿಸಿದಾಗ ಪೋಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು Emergency ಸಂದರ್ಭಗಳಲ್ಲಿ ಯೋಜನೆಗಳನ್ನು ರೂಪಿಸುವುದು ಸುಲಭವಾಗಿದೆ.
- ಬೀಟ್ ವಾರು ನಕ್ಷೆಗಳನ್ನು ತಯಾರಿಸುವಾಗ ವಿಲೇಜ್ ಕ್ಲಸ್ಟರ್ ಗಳನ್ನು ವಿಂಗಡಿಸುವುದು ಬಹು ಮುಖ್ಯವಾಗಿರುತ್ತದೆ. ಮಲೆನಾಡು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಬೇಚಾರಕ್ ಗ್ರಾಮಗಳ ಸೆಟಲ್

ಮೆಂಟ್ ಗಳನ್ನು ಗುರುತಿಸಿ, ವಿಂಗಡಿಸುವುದು ಸಂಪ್ರದಾಯಕ ವ್ಯವಸ್ಥೆಯಡಿ ಕಷ್ಟಕರ. ಜಿಐಎಸ್ ತಂತ್ರಜ್ಞಾನವನ್ನು ಬಳಸಿ ಬೇಚಾರಕ್ ಗ್ರಾಮಗಳನ್ನು , ಗ್ರಾಮಗಳ ಗಡಿಗಳನ್ನು ಗುರುತಿಸುವುದರಿಂದ ಗಸ್ತು ವರ್ಗೀಕರಣ ಮತ್ತಷ್ಟು ಉತ್ತಮ ಮತ್ತು ವೈಜ್ಞಾನಿಕ ಆಧಾರಿತವಾಗಿದೆ.

- ಸುಧಾರಿತ ಗಸ್ತು ವ್ಯವಸ್ಥೆಯ ನಕ್ಷೀಕರಣದಲ್ಲಿ ಅಕ್ಕ-ಪಕ್ಕದ ಬೀಟ್ ಮತ್ತು ಪೋಲೀಸ್ ಠಾಣೆ, ಉಪವಿಭಾಗ ಕಛೇರಿ, ವೃತ್ತ ಕಛೇರಿ, ಹೊರಠಾಣೆ, ಸಶಸ್ತ್ರ ಮೀಸಲು ಪಡೆಯನ್ನು ಗುರಿತಿಸುವುದರಿಂದ ಸಿಬ್ಬಂದಿಗಳ ಕೊರತೆ ಇದ್ದಲ್ಲಿ ಸಿಬ್ಬಂದಿಗಳನ್ನು ನಿಯೋಜನೆ ಮಾಡಿಕೊಳ್ಳಬಹುದು ಮತ್ತು ಪೋಲಿಸ್ ವ್ಯವಸ್ಥೆಯನ್ನು ಮತ್ತಷ್ಟು ಸದೃಡಗೊಳಿಸಬಹುದಾಗಿರುತ್ತದೆ.

ಬಹು ಮುಖ್ಯವಾಗಿ ಬಳಕೆದಾರರಿಗೆ ಎನ್.ಆರ್.ಡಿ.ಎಂ.ಎಸ್ ಕೇಂದ್ರದಲ್ಲಿ ವೈಜ್ಞಾನಿಕವಾಗಿ ಸಿದ್ಧಪಡಿಸಿ, ಪೋಲಿಸ್ ಇಲಾಖೆಗೆ ಸಲ್ಲಿಸಿದ ನೂತನ ಗಸ್ತುವಾರು ನಕ್ಷೆಗಳಿಂದ ಆಯಾ ಗಸ್ತುಗಳಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ತಾನು ಕಾರ್ಯ ನಿರ್ವಹಿಸಬೇಕಾಗಿರುವ ಭೌಗೋಳಿಕ ವ್ಯಾಪ್ತಿಯ ಪರಿಕಲ್ಪನೆ ದೊರೆತಿದೆ. ಜೊತೆಗೆ ಪೋಲಿಸ್ ಇಲಾಖೆಗೆ ಹಾಗೂ ಸಿಬ್ಬಂದಿಗೆ ತುರ್ತು ಸಂದರ್ಭಗಳಲ್ಲಿ ಯಾವ ಸ್ಥಳಗಳನ್ನು ಯಾವ ರಸ್ತೆಯ ಮೂಲಕ ಸುರಕ್ಷಿತವಾಗಿ ತಲುಪಬೇಕು ಮತ್ತು ಯಾವ ಕಾರ್ಯವನ್ನು ಕೈಗೊಳ್ಳಬೇಕೆಂಬ ಸಂಪೂರ್ಣ ಚಿತ್ರಣಗಳು ನಕ್ಷೆಗಳಿಂದ ದೊರೆತಿದೆ.

ಗಸ್ತು ನಕ್ಷೆಯನ್ವಯ ಜಿಲ್ಲೆಯಲ್ಲಿ ಇಲಾಖೆಯ ಮುಖ್ಯಸ್ಥರು ಸಿಬ್ಬಂದಿಯ ಲಭ್ಯತೆ ಮತ್ತು ಗಸ್ತಿನ ವಿಸ್ತೀರ್ಣ ವನ್ನು ಅನುಸರಿಸಿ ಪ್ರತಿ ಬೀಟ್ ಗೆ ಒಬ್ಬರಂತೆ, 2-3 ಬೀಟ್ ಗೆ ಒಬ್ಬರಂತೆ ಪೋಲಿಸ್ ಸಿಬ್ಬಂದಿಯನ್ನು ನೇಮಕ ಮಾಡಿದ್ದಾರೆ. ಜೊತೆಗೆ ಸದರಿ ನಕ್ಷೆಗಳನ್ನು ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರು ರವರಿಗೆ ಸುಧಾರಿತ ಗಸ್ತುವ್ಯವಸ್ಥೆಯ ವಿವರಗಳೊಂದಿಗೆ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ ಇವರು ಸಲ್ಲಿಸಿರುತ್ತಾರೆ. ಪ್ರಮುಖವಾಗಿ ಈ ಪ್ರಕ್ರಿಯೆಯಲ್ಲಿ ಪಶ್ಚಿಮ ವಲಯದ IGP ರವರ ವ್ಯಾಪ್ತಿಗೆ ಬರುವ ಎಲ್ಲಾ 4 ಜಿಲ್ಲೆಗಳ ಮಾಹಿತಿ (ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು) ಯನ್ನು ನೀಡಿ ಸಹಕರಿಸಿದ ಜಿಲ್ಲಾ ಎನ್.ಆರ್.ಡಿ.ಎಂ.ಎಸ್ ಶಾಖೆಗಳ ಅಧಿಕಾರಿಗಳು ಪ್ರಮುಖವಾಗಿ ಕಾರಣರಾಗಿರುತ್ತಾರೆ

## HOSANAGARA BEAT- SHIVAMOGGA DISTRICT






ಕೆ ಕಿರಣ ರಾಜ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಕೊಡಗು




ಭೀಮಸೇನ್ ಎಲ್ ಕುಲ್ಕರ್ಣಿ, ಎನ್.ಆರ್.ಡಿ.ಎಂ.ಎಸ್ . ಕೇಂದ್ರ, ಕಲಬುರ್ಗ

# ಜಲಾನಯನ ಪ್ರದೇಶದಲ್ಲಿ ಕೈಗೊಳ್ಳುವ ಸಂರಕ್ಷಣೆ ಚಟುವಟಿಕೆಗಳ ನಕ್ಷೆ

**ಮಂಜುನಾಥ ಎಸ್ ತೋಟದ, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಬೆಳಗಾವಿ**

## ಹಿನ್ನೆಲೆ

2016-17ನೇ ಸಾಲಿನ ಪಿ.ಎಮ್.ಕೆ.ಎಸ್.ವಾಯ್ (ಓ.ಐ) ಹಾಗೂ ಎಮ್.ಜಿ.ಎನ್.ಆರ್.ಇ.ಜಿಎ ಯೋಜನೆಯಡಿ ರಾಮದುರ್ಗ ಹಾಗೂ ರಾಯಬಾಗ ತಾಲೂಕಿನ ಆಯ್ದ ಜಲಾನಯನ ಪ್ರದೇಶಗಳಲ್ಲಿ ಮಣ್ಣು ಹಾಗೂ ನೀರು ಸಂರಕ್ಷಣೆ ಕಾರ್ಯಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಹಾಗೂ ಕೃಷಿ ಇಲಾಖೆ ವರದಿಯನ್ನು ಸಿದ್ದಪಡಿಸಲು GIS ನಕ್ಷೆಗಳ ಅವಶ್ಯಕತೆ ಇರುತ್ತದೆ. ಸದರಿ ನಕ್ಷೆಗಳನ್ನು ಜಿಐಎಸ್ ಮುಖಾಂತರ ತಯಾರಿಸಲು ಕೃಷಿ ಇಲಾಖೆ ಅಧಿಕಾರಿಗಳು ಎನ್.ಆರ್.ಡಿ.ಎಮ್.ಎಸ್. ಕೇಂದ್ರಕ್ಕೆ ಭೇಟಿ ನೀಡಿ ಸದರಿ ಅವಶ್ಯಕ ನಕ್ಷೆಗಳನ್ನು ತಯಾರಿಸಕೊಡಬೇಕಾಗಿ ಕೋರಲಾಗಿ, ಕೇಂದ್ರದ ವತಿಯಿಂದ ನಕ್ಷೆಗಳನ್ನು ತಯಾರಿಸಿ ಕೊಡಲಾಗಿದೆ.

## ವಿಧಾನ

ಜಲಾನಯನ ಪ್ರದೇಶಗಳಲ್ಲಿ ಮಣ್ಣು ಹಾಗೂ ನೀರು ಸಂರಕ್ಷಣೆ ಕಾರ್ಯಚಟುವಟಿಕೆಯ ನಕ್ಷೆಯನ್ನು ಸಿದ್ದಪಡಿಸುವ ಮೊದಲು ಮೂಲ ಪದರಗಳಾದ 1) ಜಲಾನಯನ ಪ್ರದೇಶದ ಗಡಿ 2) ಲೀತಾಲಜಿ 3) ಡ್ರೈನೇಜ್ 4) ನೀರಿನ ಮೂಲ 5) ಜನವಸತಿ ಹಾಗೂ ಆಡಳಿತಾತ್ಮಕ ಗಡಿರೇಖೆಗಳನ್ನೊಳಗೊಂಡ ಪದರಗಳನ್ನು ಬಳಸಿಕೊಂಡು ಜಿಐಎಸ್ ತಂತ್ರಾಂಶದ ಮೂಲಕ ಜೀಯೋ ಪ್ರೊಸೆಸ್ಸಿಂಗ್ ವಿಧಾನವನ್ನು ಅನುಸರಿಸಿ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದು ಅಂತಿಮವಾಗಿ ಜಲಾನಯನ ಪ್ರದೇಶದಲ್ಲಿ ಪಿ. ಎಮ್. ಕೆ. ಎಸ್. ವಾಯ್ (ಓ.ಐ) ಹಾಗೂ ಎಮ್.ಜಿ.ಎನ್.ಆರ್‌ಇ.ಜಿ.ಎ ಯೋಜನೆಯಡಿ ಕೈಗೊಳ್ಳುವ ಸಂರಕ್ಷಣಾ ಚಟುವಟಿಕೆಗಳನ್ನು ಗುರುತಿಸಿ ರಾಯಬಾಗ ಹಾಗೂ ರಾಮದುರ್ಗ ತಾಲೂಕಿನ ನಕ್ಷೆಯನ್ನು ಸಿದ್ದಪಡಿಸಲಾಯಿತು.

**SOIL AND WATER CONSERVATION TREATMENT –RAYBAG TALUK, BELGAVI DISTRICT**



# ನಗರಯೋಜನಾ ಪುನರ್ ವಿಂಗಡಣೆ ಮತ್ತು ಅವಶ್ಯಕತೆ

**ಕಾರ್ತಿಕ್ ಎಂ ಎಸ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಚಾಮರಾಜನಗರ**

**ಪೀಠಿಕೆ**

ನಗರ ಮತ್ತು ನಗರಯೋಜನೆಯು ತೀರ ಜಟಿಲವಾದ ಮತ್ತು ಚಲನಾತ್ಮಕ ವಿಷಯವಾಗಿದ್ದು, ಇದರ ಕಾರಣ ಮತ್ತು ಪರಿಣಾಮಗಳೆರಡು ಅಭಿವೃದ್ಧಿಯ ಮೂಲಮಂತ್ರವಾಗಿದೆ. ನಗರಜನಸಂಖ್ಯೆ ಬೆಳವಣಿಗೆಯೊಂದಿಗೆ ನಗರ ವಾರ್ಡ್‌ಗಳ ಪುನರ್ ವಿಂಗಡಣೆಯು ಇತ್ತೀಚಿನ ದಿನಗಳಲ್ಲಿ ತೀರ ಅವಶ್ಯಕವಾದ ವಿಷಯ ವಸ್ತುವಾಗಿದೆ. ನಗರ ಯೋಜನೆ ಪುನರ್ ವಿಂಗಡಣೆಯು ಪ್ರಸ್ತುತ ವಿಷಯವಾಗಿರದೆ ಭವಿಷ್ಯತ್ತಿನ ಯೋಜನೆಗೆ ಅವಶ್ಯಕತೆಯ ಸಾಧನವಾಗಿರುತ್ತದೆ. ಏಕೆಂದರೆ ಜನಸಂಖ್ಯೆ ಆಧಾರದ ಮೇಲೆ ನಗರ ಪುನರ್ ವಿಂಗಡಣೆಯು ನಗರದ ಎಲ್ಲಾ ಭಾಗದ ಬೆಳವಣಿಗೆಗೆ ಸಮಾನ ಅವಕಾಶವನ್ನು ಒದಗಿಸುವುದಲ್ಲದೆ ಸಂಪನ್ಮೂಲದ ಕ್ರೋಢಿಕರಣ ಹಾಗೂ ಸಮಾನ ಹಂಚಿಕೆಗೆ ಸಹಾಯಕವಾಗುತ್ತವೆ.

**ನಗರ ಪುನರ್ ವಿಂಗಡಣೆಯ ನಕ್ಷೆಯ ಉಪಯುಕ್ತತೆ**

ನಗರ ಪುನರ್ ವಿಂಗಡಣೆಯ ನಕ್ಷೆಗಳು ನಗರಯೋಜನೆಯ ನಗರ ಯೋಜನಾಕಾರರಿಗೆ ಮತ್ತು ಯೋಜನಾ ನಿರ್ವಾಹಕರಿಗೆ ನಗರದ ಮೂಲಭೂತ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಜನಸಂಖ್ಯೆಯೊಂದಿಗೆ ಬೆಳೆಯುತ್ತಿರುವ ನಗರ ವಿಸ್ತಾರವನ್ನು ತಿಳಿಯಲು ಹಾಗೂ ಭವಿಷ್ಯದ ಯೋಜನೆಯ ದೃಷ್ಠಿಕೋನವನ್ನು ನಿರ್ವಹಿಸಲು ಸಹಾಯಕವಾಗಿದೆ. ಮೂಲಭೂತ ಸೌಕರ್ಯದೊಂದಿಗೆ ಭವಿಷ್ಯದ ನಗರ ಪರಿಸರವನ್ನು ನಿರಂತರ ಕಾಯ್ದುಕೊಂಡು ಹೋಗಲು ಮಾರ್ಗದರ್ಶಕವಾಗಿ ಕೆಲಸವನ್ನು ಮಾಡುತ್ತಾ ಜನಸಂಖ್ಯೆಯ ಹಂಚಿಕೆಯೊಂದಿಗೆ ಸಂಪನ್ಮೂಲದ ಹೂಡಿಕೆಗೆ ಸ್ಥಳೀಯ ಸರ್ಕಾರಗಳಿಗೆ ಮಾರ್ಗದರ್ಶಕವಾಗಿ ಕೆಲಸವನ್ನು ಮಾಡುತ್ತವೆ. ಯೋಜನಾ ನಾವಿನ್ಯತೆಯನ್ನು ಕಾಪಾಡಿಕೊಂಡು ಭವಿಷ್ಯದ ಮಾರ್ಗದರ್ಶನದೊಂದಿಗೆ ಸಂಪನ್ಮೂಲದ ಸ್ಥಿರ ಹಂಚಿಕೆ ಹಾಗೂ ಸಂರಕ್ಷಿತ ಅಭಿವೃದ್ಧಿಗೆ ಸ್ಥಳೀಯ ನಗರ ಪ್ರದೇಶದ ವ್ಯಾಪ್ತಿ ಮತ್ತು ಸಂಪನ್ಮೂಲವನ್ನು ಕಲೆ ಹಾಕಲು ಸಹಾಯ ಮಾಡುತ್ತದೆ.

**ವಾರ್ಡ್‌ಗಳ ಪುನರ್ ವಿಂಗಡಣೆ ನಕ್ಷೆತಯಾರಿಸುವ ವಿಧಾನ**

ಸರ್ಕಾರದಆದೇಶ ಸಂ:ಯುಡಿಪಿ/23/ಟಿಎಂಎಸ್/2014 ಆಧಾರದ ಮೇಲೆ ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರಜಿಲ್ಲೆ, ಚಾಮರಾಜನಗರರವರು ಜಿಲ್ಲಾ ಎನ್.ಆರ್.ಡಿ.ಎಂ.ಎಸ್. ಕಾರ್ಯಾಲಯಕ್ಕೆ ಚಾಮರಾಜನಗರ ಜಿಲ್ಲೆಯ ಎಲ್ಲಾ ನಗರ ವ್ಯಾಪ್ತಿಯ ಪುನರ್ ವಿಂಗಡಣೆಗೆ ನಕ್ಷೆಯನ್ನು ರಚಿಸಲು ತಿಳಿಸಿದ್ದು, ಅದರಂತೆ ಜಿಲ್ಲೆಯ ನಗರ ಯೋಜನಾ ಅಧಿಕಾರಿಗಳನ್ನು ಸಂಪರ್ಕಿಸಿ ಪ್ರಸ್ತುತ ನಗರ ನಕ್ಷೆಗಳ ನೀಲಿನಕ್ಷೆಗಳನ್ನು ತೆಗೆದುಕೊಂಡು ಎಲ್ಲಾ ನಗರಸಭೆ ಹಾಗೂ ಪಟ್ಟಣ ಪಂಚಾಯತ್‌ನ ಅಭಿಯಂತರುಗಳ್ಳನ್ನು ಒಳಗೊಂಡ ಸಭೆಯನ್ನು ಕರೆದು ನಗರ ಪುನರ್ವಿಂಗಡಣೆಯನ್ನು ಸರ್ಕಾರದ ನಿರ್ದೇಶನದ ಮೇರೆ ಹೇಗೆ ರಚಿಸಬೇಕೆಂದು ಚರ್ಚಿಸಲಾಯಿತು. ಅದರಂತೆ ನಿಯೋಜಿಸಿದ ಅಭಿಯಂತರುಗಳ್ಳನ್ನು ಜನಸಂಖ್ಯೆಯ ಆಧಾರದ ಮೇಲೆ ಹಾಗೂ ಕಚ್ಚಾ ನಕ್ಷೆ ಹಾಗೂ

ಅಂಕಿಅಂಶಗಳನ್ನು ಒಳಗೊಂಡ ಮಾಹಿತಿಯನ್ನು GIS ತಂತ್ರಾಂಶದ ಸಹಾಯದಿಂದ ನಗರ ಪುನರ್ ವಿಂಗಡಣೆಗೆ ನಕ್ಷೆಗಳನ್ನು ತಯಾರಿಸಲಾಯಿತು.

## WARD DELIMITATION -2011 CENSUS




| Sl No | Ward NO | Block wise population | | | | Ward wise population | | |
|---|---|---|---|---|---|---|---|---|
| | | Block | Male | Female | Total | Male | Female | Total |
| 1 | 1 | 1 | 212 | 217 | 429 | 402 | 436 | 838 |
| | | 2 | 190 | 219 | 409 | | | |
| 2 | 2 | 3 | 126 | 127 | 253 | 441 | 410 | 851 |
| | | 4 | 315 | 283 | 598 | | | |
| 3 | 3 | 5 | 116 | 108 | 224 | 380 | 371 | 751 |
| | | 6 | 264 | 263 | 527 | | | |
| 4 | 4 | 7 | 240 | 185 | 425 | 467 | 408 | 875 |
| | | 8 | 227 | 223 | 450 | | | |
| 5 | 5 | 9 | 132 | 142 | 274 | 401 | 422 | 823 |
| | | 10 | 269 | 280 | 549 | | | |
| 6 | 6 | 11 | 178 | 185 | 363 | 432 | 442 | 874 |
| | | 12 | 254 | 257 | 511 | | | |
| 7 | 7 | 13 | 268 | 238 | 506 | 375 | 350 | 725 |
| | | 14 | 107 | 112 | 219 | | | |
| 8 | 8 | 15 | 109 | 105 | 214 | 265 | 285 | 550 |
| | | 16 | 80 | 92 | 172 | | | |
| | | 17 | 76 | 88 | 164 | | | |
| 9 | 9 | 18 | 385 | 424 | 809 | 385 | 424 | 809 |
| 10 | 10 | 19 | 202 | 184 | 386 | 412 | 434 | 846 |
| | | 20 | 210 | 250 | 460 | | | |
| 11 | 11 | 21 | 314 | 274 | 588 | 432 | 405 | 837 |
| | | 22 | 118 | 131 | 249 | | | |
| Total Population = | | | 4392 | 4387 | 8779 | 4392 | 4387 | 8779 |

# ಆರೋಗ್ಯ  ಇಲಾಖೆಗೆ ಜಿ.ಐ.ಎಸ್ ನ ಉಪಯೋಗಗಳು

**ಮಂಜುಳ ಆರ್ ಚಂದಗೋಲ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಚಿಕ್ಕಬಳ್ಳಾಪುರ**

**ಉದ್ದೇಶ**

ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿ, ಚಿಕ್ಕಬಳ್ಳಾಪುರ ಇವರು ಜಿಲ್ಲೆಯಲ್ಲಿ ಫ್ಲೋರೋಸಿಸ್ ತಡೆಗಟ್ಟುವ ಉದ್ದೇಶದಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ತಾಲ್ಲೂಕುವಾರು ಫ್ಲೋರೋಸಿಸ್ ನೀರಿನ ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ಅದಕ್ಕೆ ನೀಡಿರುವ ಕಲರ್ ಕೋಡ್ ಪ್ರಕಾರ ತಾಲ್ಲೂಕುವಾರು ಫ್ಲೋರೋಸಿಸ್ ವರದಿಗಳ ಆಧಾರದ ಮೇಲೆ ನಕ್ಷೆಗಳನ್ನು ಮಾಡಿಕೊಡಲು ಪತ್ರದ ಮೂಲಕ ಕೋರಿದ್ದು, ಎನ್.ಆರ್.ಡಿ.ಎಂ.ಎಸ್ ಕೇಂದ್ರ GIS ತಂತ್ರಜ್ಞಾನ ಬಳಸಿ ಮ್ಯಾಪಿಂಗ್ ಮಾಡಿದ್ದು ಆರೋಗ್ಯ ಇಲಾಖೆಗೆ ಸಲ್ಲಿಸಲಾಗಿರುತ್ತದೆ.

**ವಿಧಾನ**

ಜಿಲ್ಲಾ ಆರೋಗ್ಯ ಇಲಾಖೆಯ ಫ್ಲೋರೋಸಿಸ್ ಘಟಕ ನೀಡಿದ ತಾಲ್ಲೂಕುವಾರು ಹಾಗೂ ಗ್ರಾಮವಾರು ಫ್ಲೋರೋಸಿಸ್ ವರದಿಗಳನ್ನು GIS ಸಹಾಯದಿಂದ ದತ್ತಾಂಶಗಳನ್ನು ಕ್ರೋಡೀಕರಿಸಲಾಯಿತು ಹಾಗೂ ಇದರೊಂದಿಗೆ RO Plants ಹಾಕಿರುವ ಮಾಹಿತಿಯನ್ನು ಕೂಡಾ ಇಂಧೀಕರಿಸಲಾಯಿತು. ಸಂಬಂಧಪಟ್ಟ ಇಲಾಖೆಯು ನೀಡಿರುವ ಫ್ಲೋರೋಸಿಸ್ ಕಲರ್ ಕೋಡ್ ಪ್ರಕಾರ ತಾಲ್ಲೂಕುವಾರು ನಕಾಶೆಗಳನ್ನು ತಯಾರಿಸಿ ಒದಗಿಸಲಾಯಿತು.

**ಅಂಕಿ ಅಂಶಗಳ ಅವಶ್ಯಕತೆ**

- 2015 ನೇ ಸಾಲಿನಿಂದ 2016ನೇ ಸಾಲಿನವರೆಗೆ 6 ತಾಲ್ಲೂಕುಗಳಲ್ಲಿ ಗ್ರಾಮವಾರು ಫ್ಲೋರೋಸಿಸ್ ಪ್ರಮಾಣ (ppm) ವ್ಯತ್ಯಾಸ ಕಂಡುಬಂದಿರುವ ಬಗ್ಗೆ ಮಾಹಿತಿಯ ಅವಶ್ಯಕತೆ ಇರುತ್ತದೆ.
- 2016ನೇ ಸಾಲಿನಲ್ಲಿ ಹಿಂದಿನ ಸಾಲಿಗಿಂತ ಈವರೆಗೂ RO Plants ಹಾಕಿರುವ ಮಾಹಿತಿಯ ಅವಶ್ಯಕತೆಯಿರುತ್ತದೆ.

**ಬಳಕೆದಾರನ ಅವಶ್ಯಕತೆ**

- ಪ್ರತಿ ಗ್ರಾಮವಾರು ನೀರಿನ ಮಾದರಿಗಳನ್ನು ಪರೀಕ್ಷಿಸಿದ ನಂತರ ಫ್ಲೋರೋಸಿಸ್ ಅಂಶ (ppm) ಹೆಚ್ಚಾಗಿರುವ ಅಥವಾ ಕಡಿಮೆ ಇರುವ ಮಾಹಿತಿ ತಿಳಿದುಕೊಳ್ಳಲು, ನಕ್ಷೆಗಳು ಇಲಾಖೆಯ ಅಧಿಕಾರಿಗಳಿಗೆ ಸಹಾಯಕವಾಗಿರುತ್ತದೆ.
- ಫ್ಲೋರೋಸಿಸ್ ಅಂಶ (ppm ನೀರಿನಲ್ಲಿ ಕಂಡುಬರುವುದರಿಂದ ಅದರಿಂದ ಹರಡುವ ರೋಗಗಳು ಮತ್ತು ಅದನ್ನು ತಡೆಗಟ್ಟಲು GIS ನಕ್ಷೆಗಳು ಉಪಯುಕ್ತವಾಗಿರುತ್ತವೆ.
- RO Plants ಸೌಲಭ್ಯವನ್ನು ಗ್ರಾಮವಾರು ಅಳವಡಿಸುವುದರ ಬಗ್ಗೆ ಸೂಕ್ತ ಮಾಹಿತಿಯನ್ನು ತಿಳಿದುಕೊಳ್ಳಲು ನಕ್ಷೆಗಳು ಬಹಳ ಉಪಯೋಗವಾಗಿರುತ್ತದೆ.

**GIS ನಕ್ಷೆಯ ಉಪಯೋಗ:**

ಚಿಕ್ಕಬಳ್ಳಾಪುರ ಜಿಲ್ಲೆಯ 6 ತಾಲ್ಲೂಕುಗಳಲ್ಲಿ ಫ್ಲೋರೋಸಿಸ್ ಅಂಶವು ಹೆಚ್ಚಾಗಿ ಕಂಡುಬಂದಿದ್ದು, ಅದರಲ್ಲಿ ಬಾಗೇಪಲ್ಲಿ ತಾಲ್ಲೂಕು ಪ್ರಮುಖವಾಗಿದೆ. ಆದ್ದರಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ವಿಭಾಗದ ಅಡಿಯಲ್ಲಿ ರಾಷ್ಟ್ರೀಯ ಫ್ಲೋರೋಸಿಸ್ ತಡೆಗಟ್ಟುವ ಉದ್ದೇಶದಿಂದ GIS ನಕ್ಷೆಗಳ ಮುಖಾಂತರ ಮುಂಜಾಗೃತ ಕ್ರಮ ಕೈಗೊಳ್ಳಲು ಈ GIS ನಕ್ಷೆಗಳನ್ನು ಬಳಸಲಾಗಿರುತ್ತದೆ.

ಅದರಂತೆ, ತಾಲ್ಲೂಕುವಾರು ಫ್ಲೋರೋಸಿಸ್ ವರದಿಗಳ ನಕ್ಷೆಗಳ ಸಾಫ್ಟ್ ಪ್ರತಿ ಹಾಗೂ ಹಾರ್ಡ್ ಪ್ರತಿ ಕಲರ್ ಪ್ರಿಂಟ್ ಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರರವರಿಗೆ ಎನ್.ಆರ್.ಡಿ.ಎಂ.ಎಸ್ ಕೇಂದ್ರವು ಒದಗಿಸಿರುತ್ತದೆ.



# ಪ್ರವಾಸಿ ನಕಾಶೆ

**ಮಮತಾ ಕೆ ಎಸ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ದಕ್ಷಿಣ ಕನ್ನಡ**

**ಅಗತ್ಯತೆ ಹಾಗೂ ಉದ್ದೇಶ**

ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಸಭೆ ಕರೆದು ಜಿಲ್ಲೆಯ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಹಾಗೂ ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಜಿ.ಪಿ.ಎಸ್. ಹಾಗೂ ಜಿ.ಐ.ಎಸ್. ತಂತ್ರಜ್ಞಾನವನ್ನು ಬಳಸಿಕೊಂಡು ಜಿಲ್ಲೆಯ ಪ್ರವಾಸಿ ನಕಾಶೆಯನ್ನು ತಯಾರಿಸಿಕೊಡಲು ಜಿಲ್ಲಾ ಎನ್.ಆರ್.ಡಿ.ಎಮ್.ಎಸ್. ಕೇಂದ್ರಕ್ಕೆ ಆದೇಶಿಸಿದರು, ಬಹುಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ದ ಧಾರ್ಮಿಕ ಕೇಂದ್ರಗಳು ಹಾಗೂ ಸಮುದ್ರ ತೀರಗಳಿಗೆ ಖ್ಯಾತಿಯನ್ನು ಪಡೆದಿದ್ದು, ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗಳಿಗೆ ಅನುಕೂಲವಾಗಲು ಜಿಲ್ಲಾ ಪ್ರಸಿದ್ದ ಪ್ರವಾಸಿ ಸ್ಥಳಗಳು ಹಾಗೂ ಸಾರಿಗೆ ಸಂಪರ್ಕ ವ್ಯವಸ್ಥೆಯನ್ನು ಒಳಗೊಂಡಂತೆ ಪ್ರವಾಸಿ ನಕಾಶೆಯನ್ನು ಜಿಲ್ಲಾ ಎನ್.ಆರ್.ಡಿ.ಎಮ್.ಎಸ್. ಕೇಂದ್ರದಲ್ಲಿ ಸಿದ್ದಪಡಿಸಲು ಉದ್ದೇಶಿಸಲಾಯಿತು.

**ವಿಧಾನ**

ಜಿಲ್ಲಾ ಪ್ರವಾಸೋದ್ಯಮ ಇಲಾಖೆಯಿಂದ ಜಿಲ್ಲೆಯೊಳಗಿರುವ ಪ್ರಸಿದ್ದ ಪ್ರವಾಸಿ ಸ್ಥಳಗಳ ಮಾಹಿತಿಯನ್ನು ಪಡೆಯಲಾಯಿತು. ಪ್ರಸಿದ್ದ ಪ್ರವಾಸಿ ಕೇಂದ್ರಗಳು ಅಕ್ಷಾಂಶ/ರೇಖಾಂಶಗಳ ಮಾಹಿತಿಯನ್ನು ಗೂಗಲ್ ಅರ್ಥ್ Portal ಮುಖಾಂತರ ಪಡೆಯಲಾಯಿತು. ಗೂಗಲ್ ಅರ್ಥ್ ಮುಖಾಂತರ ಪಡೆದ ಪ್ರವಾಸಿ ಕೇಂದ್ರಗಳ ನಿಖರ ಸ್ಥಳ ಮಾಹಿತಿಯೊಂದಿಗೆ ಎನ್.ಆರ್.ಡಿ.ಎಮ್.ಎಸ್. ಕೇಂದ್ರದಲ್ಲಿ ಲಭ್ಯವಿರುವ ರಸ್ತೆಗಳು, ನದಿಗಳು, ತಾಲೂಕು ಸರಹದ್ದು ಮತ್ತು ಜಿಲ್ಲಾ ಸರಹದ್ದು ಮುಂತಾದ ಗಣಕೀಕೃತ ಅಂಕಿ ಅಂಶಗಳನ್ನು ಉಪಯೋಗಿಸಿಕೊಂಡು GIS ತಂತ್ರಾಂಶ ಬಳಸಿ ನಕಾಶೆಯನ್ನು ತಯಾರಿಸಲಾಯಿತು.

**ಉಪಯುಕ್ತತೆ**

ದ.ಕ.ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಮತ್ತು ಪ್ರವಾಸೋದ್ಯಮದ ಬೆಳವಣಿಗೆಗಾಗಿ ಈ ಪ್ರವಾಸಿ ನಕಾಶೆಯು ಸಹಕಾರಿಯಾಗಲಿದೆ. ಜಿಲ್ಲಾ ಎನ್.ಆರ್.ಡಿ.ಎಮ್.ಎಸ್ ಕೇಂದ್ರದಲ್ಲಿ ತಯಾರಿಸಲ್ಪಟ್ಟ ಜಿಲ್ಲಾ ಪ್ರವಾಸಿ ನಕಾಶೆಯು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ದ.ಕ.ಜಿ.ಪಂ., ಜಿಲ್ಲಾ ಪ್ರವಾಸೋದ್ಯಮ ಇಲಾಖೆ ಹಾಗೂ ಜಿಲ್ಲೆಯ ಇತರ ಸರಕಾರಿ ಕಛೇರಿಗಳಲ್ಲಿ ಮುದ್ರಿಸಿ ಪ್ರಕಟಿಸಲಾಗಿದೆ. ಅತೀ ಮುಖ್ಯವಾಗಿ ಪ್ರವಾಸಿಗರ ಅನುಕೂಲಕ್ಕಾಗಿ ತಯಾರಿಸಿದ ಪ್ರವಾಸಿ ಪುಸ್ತಕದಲ್ಲಿ ಮುದ್ರಿಸಿ ಹಂಚಲಾಗಿದೆ.


TOURIST MAP OF DAKSHINA KANNADA DISTRICT
Karnataka
One state. Many worlds.
Department of Tourism
UDUPI DISTRICT
CHICKMAGALUR DISTRICT
KERALA STATE
SOMAWARAPETE
KODAGU DISTRICT
ARABIAN SEA
Towards Karkal, Udupi Shringeri
Towards Udupi Shri Krishna Matt
St. Maries Iceland
Maravanthe Beach
Kollura Mookambika Temple
Towards Hassan, Bengaluru
Towards Kasaragodu
Towards Madikeri, Mysuru
kilometers
Mangaluru
Bantwal
Belthangady
Puttur
Sulya
Moodabidre

# ಪಶುಪಾಲನಾ ಹಾಗು ಪಶುವೈದ್ಯಕೀಯ ಇಲಾಖೆಯ ಆಸ್ತಿಗಳ ನಕ್ಷೆ

**ಮಮತಾ ಕೆ ಎಸ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ದಕ್ಷಿಣ ಕನ್ನಡ**

**ಅಗತ್ಯತೆ ಮತ್ತು ಉದ್ದೇಶ**

ದಕ್ಷಿಣ ಕನ್ನಡ ಜಿಲ್ಲಾ ಪಶುಪಾಲನಾ ಹಾಗು ಪಶು ವೈದ್ಯಕೀಯ ಇಲಾಖೆಯ ಉಪನಿರ್ದೇಶಕರು ಕಳೆದ ಜನವರಿ 2016ರಂದು ಅವರ ಇಲಾಖೆಗೆ ಒಳಪಟ್ಟಿರುವ ಆಸ್ತಿಗಳು ಹಾಗು ಸಂಸ್ಥೆಗಳ ನಿಖರವಾದ ಸ್ಥಳ ಮಾಹಿತಿಯನ್ನು GPS ಮುಖಾಂತರ ಪಡೆದು GIS ತಂತ್ರಜ್ಞಾನವನ್ನು ಬಳಸಿ ನಕಾಶೆಯನ್ನು ತಯಾರಿಸಿಕೊಡಲು ವಿನಂತಿಸಿದ್ದರು. GPS ಸಮೀಕ್ಷೆಯ ಬಹು ಮುಖ್ಯ ಉದ್ದೇಶವೇನೆಂದರೆ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಆಸ್ತಿ ವಿವರಗಳ ನಿಖರವಾದ ಸ್ಥಳ ಮಾಹಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಬಹುದಾದ ಪಶುಪಾಲನಾ ಹಾಗು ಪಶು ವೈದ್ಯಕೀಯ ಇಲಾಖೆಗೆ ಸಂಬಂಧಪಟ್ಟ ಸಂಸ್ಥೆಗಳ ಬೇಡಿಕೆ ಇರುವ ಪ್ರದೇಶಗಳ ಒಂದು ಸ್ಪಷ್ಟ ಚಿತ್ರಣ ದೊರೆಯುವುದು.

**ಅಂಕಿ ಅಂಶಗಳು ಮತ್ತು ವಿಧಾನ**

1. ಜಿಲ್ಲಾ ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಸಂಸ್ಥೆಗಳು ಹಾಗೂ ಆಸ್ತಿಗಳ ವಿವರವನ್ನು ಎನ್.ಆರ್.ಡಿ.ಎಮ್.ಎಸ್. ಕೇಂದ್ರಕ್ಕೆ ನೀಡಲಾಯಿತು. ಅವುಗಳು ಯಾವುವೆಂದರೆ.

- ಪಶು ವೈದ್ಯಕೀಯ ಆಸ್ಪತ್ರೆ.
- ಪಶು ಚಿಕಿತ್ಸಾಲಯ
- ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ
- ಕೋಳಿ ಸಾಕಾಣಿಕೆ ಮತ್ತು ತರಬೇತಿ ಕೇಂದ್ರ
- ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ
- ಪ್ರಾದೇಶಿಕ ಕೋಳಿ ಸಾಕಾಣಿಕೆ ಕೇಂದ್ರ ಮುಂತಾದವು.

2. ಅನಂತರ ಇಲಾಖೆಯ ವಾಹನದೊಂದಿಗೆ ಆಯಾ ಸಂಸ್ಥೆಗಳು ಹಾಗು ಆಸ್ತಿಗಳಿರುವ ಸ್ಥಳಗಳಿಗೆ ಭೇಟಿ ಕೊಟ್ಟು GPS ಉಪಕರಣವನ್ನು ಬಳಸಿ ಸಮೀಕ್ಷೆ ಮಾಡಲಾಯಿತು.

3. ಅಕ್ಷಾಂಶ/ರೇಖಾಂಶವಿರುವ ಸಂಸ್ಥೆಗಳ ಅಂಕಿ ಅಂಶಗಳನ್ನು GPS ಉಪಕರಣದ ಸಹಾಯದಿಂದ Map Source ಡೌನ್‌ಲೋಡ್ ಮಾಡಿದ ಆಸ್ತಿಗಳ ಮತ್ತು ಸಂಸ್ಥೆಗಳ ಅಕ್ಷಾಂಶ/ರೇಖಾಂಶವಿರುವ gdb fileನ್ನು dxf file ಆಗಿ ಪರಿವರ್ತಿಸಿ ಉಳಿಸಿಕೊಳ್ಳಲಾಯಿತು.

4. ಇಲಾಖೆಯ ಸಂಸ್ಥೆಗಳ ಅಕ್ಷಾಂಶ/ರೇಖಾಂಶದ ಅಂಕಿ ಅಂಶಗಳನ್ನು ಹೊಂದಿರುವ dxf file ನ್ನು ಎನ್.ಆರ್.ಡಿ.ಎಮ್.ಎಸ್. ಕೇಂದ್ರದಲ್ಲಿ ಲಭ್ಯವಿರುವ GIS ತಂತ್ರಾಂಶದ ಮುಖಾಂತರ tab file ಆಗಿ ಪರಿವರ್ತಿಸಿ ದತ್ತಾಂಶವನ್ನಾಗಿ ಉಳಿಸಿಕೊಳ್ಳಲಾಯಿತು.

5. ಪಶುಪಾಲನಾ ಹಾಗೂ ಪಶುವೈದ್ಯಕೀಯ ಇಲಾಖೆಯ ಡಾಟಾಬೇಸ್ ಹೊಂದಿರುವ tab file ಉಪಯೋಗಿಸಿಕೊಂಡು ಇಲಾಖೆಗೆ ಸಂಬಂಧಪಟ್ಟಂತೆ ಸಂಪೂರ್ಣ ಆಸ್ತಿಗಳ ಮತ್ತು ಸಂಸ್ಥೆಗಳ ಮಾಹಿತಿಯಿರುವ ನಕಾಶೆಯನ್ನು ತಯಾರಿಸಲಾಗಿದೆ.

**ಉಪಯೋಗಗಳು:**

ಇದರ ಬಹುಮುಖ್ಯ ಉಪಯೋಗವೇನೆಂದರೆ ಇಲಾಖೆಗೆ ಸಂಬಂಧಪಟ್ಟಂತೆ ಹೊಸದಾಗಿ ಸಂಸ್ಥೆಗಳನ್ನು ಕೇವಲ ಅಗತ್ಯವಿರುವ ಪ್ರದೇಶಗಳಲ್ಲಿ ಮಾತ್ರ ಸ್ಥಾಪಿಸಲು ಸಹಕಾರಿಯಾಗುವುದು.

- ಜಿಲ್ಲಾ ಪಶುಪಾಲನಾ ಹಾಗೂ ಪಶುವೈದ್ಯಕೀಯ ಇಲಾಖೆಗೆ ಒಳಪಟ್ಟಿರುವ ಎಲ್ಲಾ ಆಸ್ತಿಗಳು ಹಾಗೂ ಸಂಸ್ಥೆಗಳ ನಿಖರವಾದ ಸ್ಥಳ ಮಾಹಿತಿಯಿರುವ ನಕಾಶೆಯನ್ನು ಸಂಬಂಧಪಟ್ಟ ಇಲಾಖೆಗೆ ನೀಡಲಾಗಿದೆ.
- ಗೂಗಲ್ ಅರ್ಥ್ Portal ಅನ್ನು ಬಳಸಿಕೊಂಡು kml file ಸೃಷ್ಟಿಸಿ ಇಲಾಖೆಗೆ ನೀಡಲಾಗಿದೆ. ಇದರಿಂದ ಇಲಾಖೆಯು ಗೂಗಲ್ ಅರ್ಥ್ Portal ಅನ್ನು ಉಪಯೋಗಿಸಿಕೊಂಡು ಅದರ ಆಸ್ತಿಗಳ ಹಾಗೂ ಸಂಸ್ಥೆಗಳ ಇನ್ನು ಹೆಚ್ಚಿನ ನಿಖರವಾದ ಸ್ಥಳ ಮಾಹಿತಿಯನ್ನು ಪಡೆಯಬಹುದಾಗಿದೆ.



# ಬಹುಗ್ರಾಮಗಳ ಕುಡಿಯುವ ನೀರು ಪೂರೈಸುವ ಯೋಜನೆ

**ಕೇತನ್ ಕುಮಾರ್ ಪಿ, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ವಿಜಯಪುರ**

**ಉದ್ದೇಶ**

ವಿಜಯಪುರ ಜಿಲ್ಲೆಯ ಉತ್ತರದಲ್ಲಿ ಭೀಮ ನದಿ, ದಕ್ಷಿಣದಲ್ಲಿ ಕೃಷ್ಣಾ ನದಿ ಹರಿಯುತ್ತಿದ್ದರೂ ವಿಜಯಪುರ ಜಿಲ್ಲೆಯು ಹಲವಾರು ದಶಕಗಳಿಂದ ಭೀಕರ ಬರಗಾಲವನ್ನು ಎದುರಿಸುತ್ತ ಬಂದಿದೆ ಹಾಗೂ ಕುಡಿಯುವ ನೀರಿನ ಸಮಸ್ಯೆಯಿಂದ ಬಳಲುತ್ತಿದೆ.

ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಅನುದಾನಿತ ಬಹುಗ್ರಾಮಗಳ ಕುಡಿಯುವ ನೀರು ಪೂರೈಸುವ ಯೋಜನೆಯನ್ನು ಜಿಲ್ಲೆಯಲ್ಲಿ ಅನುಷ್ಠಾನ ಗೊಳಿಸುವುದು ಒಂದು ಮಹತ್ವದ ಯೋಜನೆಯಾಗಿದ್ದು, ಈ ಯೋಜನೆಯನ್ನು ಸಕಾರಗೊಳಿಸಲು ವೈಜ್ಞಾನಿಕವಾಗಿ GIS ತಂತ್ರಜ್ಞಾನವನ್ನು ಅಳವಡಿಸಿ ಯೋಜನೆಯ ರೂಪುರೇಶ ಸಿದ್ದ ಪಡಿಸಿ ಪ್ರತೀ ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಎನ್.ಆರ್.ಡಿ.ಎಂ.ಎಸ್ ಶಾಖೆಯಲ್ಲಿ ಜಿಲ್ಲೆಯ ಸಂಪೂರ್ಣ ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಯ ನಕ್ಷೆಯನ್ನು ಸಮಗ್ರವಾಗಿ ಮತ್ತು ವೈಜ್ಞಾನಿಕವಾಗಿ ತಯಾರಿಸಲಾಯಿತು.

**ವಿಧಾನ**

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯವರು ವಿಜಯಪುರ ಜಿಲ್ಲೆಯ ಇಂಡಿ ತಾಲೂಕ ವಿಭಾಗಲ್ಲಿ ಬಹುಗ್ರಾಮಗಳ ಕುಡಿಯುವ ನೀರು ಪೂರೈಸುವ ಯೋಜನೆಯ ವಿವರಗಳನ್ನು GIS ಸಾಫ್ಟವೇರ ಸಹಾಯದಿಂದ ಗಣಕೀಕೃತ ಮಾಡಲಾಯಿತು. ಇಂಡಿ ತಾಲೂಕಿನ ಗ್ರಾಮಗಳ ಯೋಜನಾ ವಾರು (Scheme Wise) ಅನುಷ್ಠಾನ ಹೊಂದಿದ, ಹೊಂದುತ್ತಿರುವ, ಟೆಂಡರ್ ಮಟ್ಟದಲ್ಲಿರುವ ಹೀಗೆ ಅನೇಕ ವಿಭಾಗಗಳಾಗಿ ವಿಂಗಡಿಸಿ ಗಡಿಗಳನ್ನು ಗುರಿತಿಸಲಾಯಿತು. ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಮೂಲ ಅದರ ಶೇಖರಣಾ ಸ್ಥಳ, ಶುದ್ದೀಕರಣ ಘಟಕ, ಇತ್ಯಾದಿಗಳ ಅಕ್ಷಾಂಶ-ರೇಖಾಂಶ ವುಳ್ಳ ಮಾಹಿತಿಯನ್ನು ನಕ್ಷೆಯಲ್ಲಿ ಗುರುತಿಸಿ ನಕ್ಷೆ ತಯಾರಿಸಿ ಇಲಾಖೆಯ ಉಪಯೋಗಕ್ಕೆ ನೀಡಲಾಯಿತು.

**ಅಂಕಿ-ಅಂಶಗಳ ಅವಶ್ಯಕತೆ**

- ಯೋಜನೆ ಸಂಭಂದಪಟ್ಟ ಮಾಹಿತಿ ಅವಶ್ಯಕತೆ ಇರುತ್ತದೆ.
- ನೀರು ಪೂರೈಸುವ ಮೂಲ ಅದರ ಶೇಖರಣಾ ಸ್ಥಳ, ಶುದ್ದೀಕರಣ ಘಟಕ ಅಕ್ಷಾಂಶ/ರೇಖಾಂಶಗಳ ಮಾಹಿತಿ.
- ಕೆರೆಗಳು, ನದಿಗಳು, ಹಳ್ಳಿಗಳು, ಮತ್ತು ತಾಲೂಕು ಗಡಿಗಳನ್ನು ಉಪಯೋಗಿಸ ನಕ್ಷೆ ಯನ್ನು ತಯಾರಿಸಿ ಇಲಾಖೆಗೆ ಪೂರೈಸಲಾಯಿತು.

**ಬಳಕೆದಾರರ ಅವಶ್ಯಕತೆ**

ಕೇಂದ್ರ ಸರ್ಕಾರದ ಅನುದಾನಿತ ಮಹತ್ವಾಕಾಂಕ್ಷೆ ಯೋಜನೆಯಾದ ಬಹು ಗ್ರಾಮಗಳ ಕುಡಿಯುವ ನೀರಿನ ಪೂರೈಕೆ ಯೋಜನೆಯ ರೂಪು ರೇಶೆಗಳನ್ನು ಸಿದ್ದಪಡಿಸಲು ನಕ್ಷೆಯನ್ನು ಉಪಯೋಗಿಸುವುದಾಗಿ ತಿಳಿಸಿರುತ್ತಾರೆ. ಬಹು ಗ್ರಾಮಗಳ ಕುಡಿಯುವ ನೀರಿನ ಪೂರೈಕೆ ಯೋಜನೆಯ ಅನುಷ್ಠಾನ ಯಾವ ಹಂತದಲ್ಲಿ ಪ್ರಗತಿಯಲ್ಲಿದೆ ಎಂಬುದನ್ನು ನಕ್ಷೆ ಮೂಲಕ ಮೇಲ್ಮಟ್ಟದ ಅಧಿಕಾರಿಗಳು, ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರ ಗಳಿಗೆ ನಕ್ಷೆ ಮೂಲಕ ವರದಿಯನ್ನು ಸಲ್ಲಿಸುವುದಾಗಿ ತಿಳಿಸಿರುತ್ತಾರೆ. ಈ ಯೋಜನೆಯು ಪೂರ್ಣಗೊಳ್ಳಲು ಬಹಳ ದಿನಗಳು ತೆಗೆದುಕೊಳ್ಳುತ್ತದೆ, ಆದ್ದರಿಂದ ಯೋಜನೆ ಅನುಷ್ಠಾನದ ಪ್ರತೀ ಹಂತದಲ್ಲೂ ನಕ್ಷೆಯಲ್ಲಿ ಅನುಷ್ಠಾನ ಹೊಂದಿದ, ಹೊಂದುತ್ತಿರುವ, ಟೆಂಡರ್ ಮಟ್ಟದಲ್ಲಿರುವ ಹೀಗೆ ಅನೇಕ ವಿಭಾಗಗಳ ಮಾಹತಿಯನ್ನು ಕಾಲಕಾಲಕ್ಕೆ ಎನ್.ಆರ್.ಡಿ.ಎಂ.ಎಸ್ ಶಾಖೆಗೆ ಬಂದು ನವೀಕರಿಸಿಕೋಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಒಟ್ಟಾರೆ ಬಹು ದಿನಗಳ ಜನತೆಯ ಬಯಕೆಯಂತೆ, ಬಹು ಗ್ರಾಮಗಳ ಕುಡಿಯುವ ನೀರಿನ ಪೂರೈಕೆಯ ಯೋಜನೆಯ ಅನುಷ್ಠಾನ ಗೊಳಿಸುವಲ್ಲಿ ಎನ್.ಆರ್.ಡಿ.ಎಂ.ಎಸ್ ಪಾತ್ರ ಬಹು ಮುಖ್ಯ ಅಂಗ ಎಂದು ಸಹ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿರಿತ್ತಾರೆ.



# ಜಲಾನಯನ ಪ್ರದೇಶದ ವಿಸ್ತೀರ್ಣ ಕಂಡು ಹಿಡಿಯುವಲ್ಲಿ ಜಿ.ಐ.ಎಸ್ ನ ಉಪಯೋಗಗಳು

**ಚಂದ್ರಶೇಖರ್ ಕೆ ಗುಂದ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಬಾಗಲಕೋಟ**

**ಪ್ರಸ್ತಾವನೆ**

ರಾಮವಾಡಗಿ ಮತ್ತು ಬಿಂಜವಾಡಗಿ ಪ್ರದೇಶದಲ್ಲಿ ಹರಿದಿರುವ ಹುನಗುಂದ ನಾಲಾಗೆ (ಹಳ್ಳಕ್ಕೆ) ಕಟ್ಟಲಾಗುವ ಸೇತುವೆಗೆ ಸಂಬಂಧಿಸಿದಂತೆ ಜಲಾನಯನ ಪ್ರದೇಶದ ವಿಸ್ತೀರ್ಣ ಕಂಡು ಹಿಡಿಯುಲು GIS ಮೂಲಕ ಭೌಗೋಳಿಕ ನಕ್ಷೆ ತಯಾರಿಸುವ ವರದಿ ಹಾಗೂ ಉಪಯೋಗಗಳು.

**ಉದ್ದೇಶ**

ಸಣ್ಣ ನೀರಾವರಿ ಇಲಾಖೆಯವರು ಬಾಗಲಕೋಟ ಜಿಲ್ಲೆಯಲ್ಲಿ ಅತಿವೃಷ್ಟಿ ಅನಾವೃಷ್ಟಿ ಸಮಸ್ಯೆಗಳನ್ನು ಬಗೆ ಹರಿಸಲು ಹಾಗೂ ಕೊಳವೆಬಾವಿಯ, ಕೆರೆಯ ಅಂತರ್ಜಲ ಮಟ್ಟ ಹೆಚ್ಚಿಸಲು ಹುನಗುಂದ ಹಳ್ಳಕ್ಕೆ ಸೇತುವೆ ನಿರ್ಮಾಣ ಮಾಡಲು ಕ್ರಮಕೈಗೊಂಡಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಜಿಲ್ಲಾಧಿಕಾರಿಯವರೊಂದಿಗೆ ಸಮಾಲೋಚಿಸಿ, ಎನ್ಆರ್ಡಿಎಂಎಸ್ ಕೇಂದ್ರಕ್ಕೆ ನಕ್ಷೆ GIS ಮುಖಾಂತರ ವರದಿ ತಯಾರಿಸುವಂತೆ, ಸೂಚಿಸಿರುತ್ತಾರೆ.

**ವಿಧಾನ**

ಎನ್. ಆರ್. ಡಿ. ಎಂ. ಎಸ್. ಕೇಂದ್ರ, ಸಣ್ಣ ನೀರಾವರಿ ಇಲಾಖೆಯ ಕಿರಿ ಅಭಿಯಂತರರೊಂದಿಗೆ ಚರ್ಚಿಸಿ, ಸೇತುವೆ ಕಟ್ಟಲು ನಿಯೋಜಿಸಿದ ಸ್ಥಳದ ಜಿಪಿಎಸ್ ಮುಖಾಂತರ ಅಕ್ಷಾಂಶ ಮತ್ತು ರೇಖಾಂಶ ಪಡೆದುಕೊಂಡು KSCST ಒದಗಿಸಿರುವ ಟೊಪೊಸೀಟ್ನಲ್ಲಿ Geo-Reference ಮಾಡಿ, ತಂತ್ರಾಂಶದ ಸಹಾಯದೊಂದಿಗೆ ಪ್ರದೇಶದ ವಿಸೀರ್ಣ ಒದಗಿಸಿರುತ್ತೇವೆ. ಪ್ರದೇಶದ ವಿವರಣೆಯನ್ನು GIS ತಂತ್ರಾಂಶದ ಮುಖಾಂತರ ವಿಶ್ಲೇಷಿಸಿದೆ.

**ವಿಧಾನಗಳು**

ಹೆಚ್ಚೂರ್, ಬೆಟ್ಟದ ಛಾಯಾ ಕಿರಣ ಪದರು ಬಣ್ಣಗಳು, ಬೆಟ್ಟದ ಗುರುತು, ಮಟ್ಟದ ಗುರುತು, ಸ್ಥಳೀಯ ಎತ್ತರ, ಸ್ವರೂಪ ರೇಖೆಗಳು, ಸಮೋನ್ನತ ರೇಖೆಗಳ ಸಹಾಯದಿಂದ ಪ್ರದೇಶದ ತಗ್ಗು, ಮೈದಾನ, ಎತ್ತರ ಪ್ರದೇಶಗಳನ್ನು ಗುರುತಿಸಲಾಗಿದೆ. Google portal ನಲ್ಲಿ ಲಭ್ಯವಿರುವ ಉಪಗ್ರಹ ಚಿತ್ರಣಗಳನ್ನು GIS ತಂತ್ರಾಂಶ ಬಳಕೆ ಮಾಡಿ ವಿಶ್ಲೇಷಿತ ವರಧಿ ತಯಾರಿಸಲಾಗಿದೆ.

**ಬಳಕೆದಾರರ ಅವಶ್ಯಕತೆ**

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಣ್ಣ ನೀರಾವರಿ ಅಭಿಯಂತರರು, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಎನ್ಆರ್ಡಿಎಂಎಸ್ ಕೇಂದ್ರದಿಂದ GPS ಮತ್ತು GIS ತಂತ್ರಾಂಶ ಹಾಗೂ ದತ್ತಾಂಶ ಬಳಸಿ, ಹುನಗುಂದ ನಾಲಾದ ಜಲಾನಯನ ವಿಸ್ತೀರ್ಣ ಕಂಡು ಹಿಡಿಯುವಂತೆ ವಿನಂತಿ ಪತ್ರ ಸಲ್ಲಿಸಿರುತ್ತಾರೆ.

**ಉಪಯೋಗಗಳು**

